Age exemptions ಕೊಡುವುದರಲ್ಲಿ ಕೆಲವು ಅಡ್ಡಿ ಆದಚಣೆಗಳಿವೆ. ಸರ್ಕಾರದವರು ಇದನ್ನು ಪಬ್ಲಿಕ್ ಕಮಿಷನ್ನಿಗಾದರೂ ವಹಿಸಲಿ ಅಥವಾ ತಾವಾದರೂ ಮಾಡಲಿ ಈ ವಿಚಾರದಲ್ಲಿ ಸ್ವಲ್ಪ ಧಾರಾಳವಾಗಿರಬೇಕು. ಹನ್ನೆರಡು ಸಲ ನೋಟಿಫೈ ಮಾಡಿದಾಗ, ಪ್ರತಿಯೊಂದಕ್ಕೂ ಆರ್ಜಿಗಳನ್ನು ಸಲ್ಲಿಸಿರುತ್ತಾನೆ. ಹತ್ತು ಸಂದರ್ಭಗಳಲ್ಲಿಯೂ ಇಂಟರ್‌ವ್ಯೂಗಳಿಗೆ ಸಹಿತ ಹೋಗಿರುತ್ತಾನೆ. ಇಷ್ಟೆಲ್ಲ ಆಗಿ ಅವನಿಗೆ ಯಾವ ಸಂದರ್ಭದಲ್ಲಿಯೂ ಸೌಕರ್ಯ ದೊರೆಯದೆ ಹೋದಾಗ, ವಯೋ ಪರಿಮಿತಿ ಮೀರಿದಾಗ, age exemption ಕೊಡದೆ ಹೋದರೆ ಅಥವಾ ಅವನ ಕೇಸ್ consider ಮಾಡದೇ ಹೋದರೆ ಅನ್ಯಾಯವಾಗುತ್ತದೆ. ಇಂಥ ಸಂದರ್ಭಗಳಲ್ಲಿ age exemption ಕೊಟ್ಟೇ ಕೊಡಬೇಕು. ಇದರಿಂದ ಬಹಳ ಜನಗಳಿಗೆ, ಪದವೀಧರರಾಗಿರುವವರಿಗೆ, ಮತ್ತು ಇತರರೆಲ್ಲರಿಗೂ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ತಪ್ಪಿಸಬೇಕು ಮತ್ತು age-exemption ಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಸಂಬಂಧಪಟ್ಟ ರೂಲ್ಸ್ ಮಾಡುವಾಗ Competitive Examination ಮಾಡಬೇಕೇ ಬೇಡವೇ ಯಾವ ರೀತಿಯಲ್ಲಿ appointments ಮಾಡಿಕೊಳ್ಳಬೇಕು.....

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ರೂಲ್ಸ್ ಮಾಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೂಡ ತೆಗೆದುಕೊಳ್ಳಬೇಕು.

ಶ್ರೀಮತಿ ರಾಮಪ್ಪನವರು Competitive examinations ಬೇಕಾಗಿಲ್ಲ, backward classes ನಿಂದ ಸೆಲೆಕ್ಟ್ ಮಾಡುವಾಗ, ಅದರಲ್ಲಿಯೂ ಹಳ್ಳಿಯ ಜನರ ವಿಷಯವನ್ನು consider ಮಾಡುವಾಗ ಬಹಳ ಧಕ್ಕೆ ಬರುತ್ತದೆಂದು ಹೇಳಿದರು. ಅವರು ಹೇಳಿದುದನ್ನು ನಾನು ಒಪ್ಪುತ್ತೇನೆ. ಆದರೂ ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕಾಗಿತ್ತು. ಹಳ್ಳಿಗರು ಪಟ್ಟಣಿಗರು ಎಂದು ಭೇದ ಭಾವ ಮಾಡುವುದಕ್ಕಾಗುವುದಿಲ್ಲ. Backward class ಎಂದರೆ ಅವರು ಹಳ್ಳಿಗಳಲ್ಲಿಯೂ ಇದ್ದಾರೆ, ಪಟ್ಟಣಗಳಲ್ಲಿಯೂ ಇದ್ದಾರೆ. ಆದರೆ ಪಟ್ಟಣಗಳಲ್ಲಿರುವ ಹಿಂದುಳಿದ ಜನಗಳಿಗೆ ಸೌಲಭ್ಯಗಳು ಹೆಚ್ಚಾಗಿವೆ. ಹಳ್ಳಿಗಳಲ್ಲಿರತಕ್ಕ ಹಿಂದುಳಿದ ಜನಗಳಿಗೆ ಅಷ್ಟು ಸೌಲಭ್ಯಗಳು ದೊರೆಯುವುದಿಲ್ಲ. ಹಳ್ಳಿಗಳಲ್ಲಿ 100 ಜನ S.S.L.C. ಪಾಸ್‌ಮಾಡಿದರೆ ಹತ್ತು ಜನ ಕಾಲೇಜಿಗೆ ಹೋಗುವುದು ವಿರಳ. ಆದರೆ ಪಟ್ಟಣಗಳಲ್ಲಿ ನೂರು ಜನಗಳಿಗೆ ಕನಿಷ್ಟ ಪಕ್ಷ 70-75 ಭಾಗ ಜನರಾದರೂ ಕಾಲೇಜುಗಳಿಗೆ, technical educationಗೆ ಹೋಗತಕ್ಕ ಸೌಲಭ್ಯಗಳಿವೆ. ಇಂಥ ಸಂದರ್ಭದಲ್ಲಿ ಹುದ್ದೆಗಳಿಗೆ ನೇಮಕ ಮಾಡುವ ವಿಷಯವನ್ನು ಪರಿಶೀಲನೆಮಾಡುವಾಗ ಹಳ್ಳಿಗಳಲ್ಲಿ backward area, forward area ಎನ್ನುವುದನ್ನು ಮಾಡಿಕೊಂಡು backward class ಎನ್ನುವುದನ್ನು ಮಾಡಿಕೊಂಡರೆ, ಹಳ್ಳಿಗಳಲ್ಲಿ ಎಲ್ಲೋ ಅರ್ಹರೊಬ್ಬ

ಇಲ್ಲೊಬ್ಬ graduate ಆಗಿ ಬರುವವರಿಗೆ merit apply ಮಾಡಿದರೆ ಒಬ್ಬನು ಶೇಕಡ 40 marks ಮತ್ತೊಬ್ಬನು ಶೇಕಡ 45 ಇನ್ನೊಬ್ಬನು ಶೇಕಡ 50 ಹೀಗೆ ಅಂಕಗಳನ್ನು ತೆಗೆದುಕೊಂಡಿರುತ್ತಾರೆ. ಇದು examiner ಮತ್ತು paper valuation ಮಾಡುವವರ ಮೇಲೆ ಅನುಸರಿಸಿ ನಾನಾ ವಿಧವಾಗಿ ಹೋಗುತ್ತದೆ. ಅದನ್ನು ನಾವು ಪ್ರಶ್ನೆಮಾಡುವುದಕ್ಕಾಗುವುದಿಲ್ಲ. ಆದರೆ ಅವನು ಪಾಸ್ ಮಾಡಿದ್ದಾನೆಯೇ, ಇಲ್ಲವೇ ಎನ್ನುವುದನ್ನು ನಾವು ಪರಿಶೀಲನೆ ಬೇಕು. ಮೆರಿಟ್ ವಿಚಾರ ಪರಿಶೀಲನೆ ಮಾಡಬೇಕೇ ಅಥವಾ ಇಲ್ಲವೇ ಎಂದರೆ ಮೆರಿಟ್‌ಗೆ ಸ್ವಲ್ಪ reservation ಇಡಿ. ಆದರೆ backward areaದಲ್ಲಿ backward classನ್ನು consider ಮಾಡದೆ ಹೋದರೆ, ನೂರಕ್ಕೆ ಐದು ಜನ ಬರುವವರಿಗೂ ನೂರಕ್ಕೆ 75-80 ಜನ ಬರುವವರಿಗೂ ಸಮತೂಕ ಹಾಕಿದರೆ, ಕೊನೆಯಲ್ಲಿ ಫಲತಾಂಶವನ್ನು ನೋಡಿದರೆ ನೂರಕ್ಕೆ ಒಬ್ಬನಿಗೆ ಕೂಡ ಕೆಲಸ ಸಿಕ್ಕುವುದಿಲ್ಲ. ಇವೊತ್ತಿನ ದಿವಸ ಎಷ್ಟೋ ಜನ ಪದವೀಧರರು ಹತ್ತಾರು ಸಲ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಅರ್ಜಿ ಹಾಕಿ ಅವರು ಎಮ್ಮುಖರಾಗಿರತಕ್ಕ ಅನೇಕ ಸಂದರ್ಭಗಳಿವೆ. ಅದಕ್ಕೆ ಕಾರಣಗಳು ಏನೇ ಇರಬಹುದು. ಯಾವ ಯಾವ ಸಂದರ್ಭಗಳಲ್ಲಿ ಹೇಗೆ ತಮ್ಮ ಸ್ವಂತ ಕೇಸ್ work up ಮಾಡುವುದಕ್ಕೆ, ತನ್ನ ಅಪ್ಲಿಕೇಷನ್ ವಿಚಾರ ತಿಳಿದುಕೊಳ್ಳುವುದಕ್ಕೆ ಸ್ವಯತ್ನ ಮಾಡತಕ್ಕ ಯಾವ ಸಂದರ್ಭಗಳೇ ಇರಲಿ ಹಳ್ಳಿಯಿಂದ ಬಂದವನಿಗೂ, ಪಟ್ಟಣದಿಂದ ಬಂದಿರುವವನಿಗೂ ಸ್ವಲ್ಪ ವ್ಯತ್ಯಾಸವಿರುತ್ತದೆ. ಹಳ್ಳಿಯಲ್ಲಿರುವ ಪದವೀಧರನಾದವನು ಎಲ್ಲಿಯಾದರೂ ಹಂಗಾಮಿ ಕೆಲಸವನ್ನು ಸಂಪಾದನೆಮಾಡಲು ಆರು ತಿಂಗಳಲ್ಲಾ ಆರು ವರ್ಷ ಹುಡುಕಿದರೂ ಸಿಕ್ಕುವುದಿಲ್ಲ. ಆದರೆ ಪಟ್ಟಣಗಳಲ್ಲಿರುವ ವರಿಗೆ ಪದವೀಧರರಾದ ತಕ್ಷಣ ಒಂದೆರಡು ದಿವಸಗಳಲ್ಲೇ ಎಲ್ಲಯಾದರೂ ಕೆಲಸ ಖಾಲಿ ಇದೆಯೇ, ಯಾವ ಇಲಾಖೆಯಲ್ಲಿ ಕೆಲಸ ಖಾಲಿ ಇದೆ ಎಂದು ಹುಡುಕಿ ಪಡೆದುಕೊಳ್ಳುವ ಅವಕಾಶವಿದೆ. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಇಂಥ ಅವಕಾಶವಿರುವುದರಿಂದ ಪಟ್ಟಣಗಳಲ್ಲಿರುವವರು ಮುಂದೆ ಬರುತ್ತಾರೆ. ಹಳ್ಳಿಗಳಲ್ಲಿರುವವರಿಗೆ ಅಂಥ ಅವಕಾಶಗಳಿಲ್ಲ. ರೂಲ್ಸ್‌ನಲ್ಲಿ ಪ್ರೊವೈಡ್ ಮಾಡಿಕೊಡದೆ ಹೋದರೆ ಅವರನ್ನು ಬಹಳ ಹಿಂದಕ್ಕೆ ಎಳೆದಂತಾಗುತ್ತದೆ. Competitive examinations ಇಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಎಷ್ಟರ ಮಟ್ಟಿಗೆ ಅದನ್ನು ಅನ್ವಯಿಸಬೇಕು, ಎಷ್ಟು ಪರ್ಸೆಂಟೇಜ್ ಮೆರಿಟ್‌ನಲ್ಲಿ ಬಂದವರಿಗೆ ಕೊಡಬೇಕು, ಎಂಬುದನ್ನು ವಿಚಾರಮಾಡಬೇಕು. ಈ ದಿನ ಚರ್ಚೆಯಲ್ಲಿ ಮದ್ರಾಸ್ ಕರ್ನಾಟಕ, ಬೊಂಬಾಯಿ ಕರ್ನಾಟಕ ಎಂದು ಪ್ರಾದೇಶಿಕವಾಗಿ ಸಹ ಗಮನ ಕೊಡಬೇಕೆಂದೂ, ಜಿಲ್ಲಾವಾರು ಗಮನಕೊಡಬೇಕೆಂದೂ ತಿಳಿಸಿದರು. ಹಳೆಯ ಮೈಸೂರಿನಲ್ಲಿಯೂ ಸಹ ಹೀಗೆ ನಡೆಯುತ್ತಿದೆ ಎಂದು ಹೇಳಬಹುದು. ಬೆಂಗಳೂರಿನವರಿಗೆ ಮತ್ತು ಬೆಂಗಳೂರು ಜಿಲ್ಲೆಯವರಿಗೆ ಹೆಚ್ಚು ಅವಕಾಶಗಳು ಸಿಕ್ಕುತ್ತವೆ, ಬಾಕಿ ಜಿಲ್ಲೆಯವರಿಗೆ ಅವಕಾಶ ಸಿಕ್ಕುತ್ತಿಲ್ಲವೆಂದು ನಮ್ಮ grouse ಕೂಡ ಇದೆ. ಈ ಎಲ್ಲ ಅಂಶಗಳನ್ನೂ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್ ಅವರನ್ನು ನಾವು ನಂಬಬೇಕು. ಅವರಿಗೆ ಜವಾಬ್ದಾರಿಯನ್ನು ಕೊಟ್ಟ ಮೇಲೆ ಅವರು ಸಂಪೂರ್ಣವಾಗಿ ನ್ಯಾಯವನ್ನು ದೇಶಕ್ಕೆ ದೊರಕಿಸಿ ಕೊಡಬೇಕಾಗುತ್ತದೆ ಎನ್ನುವ ಭಾವನೆ ಇದೆ. ಆ ಭಾವನೆಯಿಂದಲೇ ಮುಂದುವರಿಯಬೇಕು ಎಂದು ಪ್ರಾರ್ಥನೆಮಾಡಿಕೊಂಡು ಈ ರಿಪೋರ್ಟನ್ನು ಅನುಮೋದಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈಗ ವಿಶಾಲ ಮೈಸೂರು ನಂನ್ಯಾನದ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ವರದಿಯ ಮೇಲೆ ಚರ್ಚೆ ನಡೆಯುತ್ತಿದೆ. ಈ ದಿವಸ ನಾವು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ 1954-55, 1955-56 ಮತ್ತು 1956-57ನೆಯ ಸಾಲುಗಳ ವರದಿಗಳ ಮೇಲೆ ಚರ್ಚೆ ಮಾಡುವುದರಿಂದ ಎಷ್ಟರ ಮಟ್ಟಿಗೆ ಒಳ್ಳೆಯದಾಗುತ್ತದೋ ನನಗೆ ಅದು ಅರ್ಥವಾಗುತ್ತಿಲ್ಲ. ಆದರೂ ಕೂಡ ಈಗ ಇದರ ಮೇಲೆ ಚರ್ಚೆಮಾಡುವುದರಿಂದ ಎಲ್ಲೆಲ್ಲ ಲೋಪದೋಷಗಳಿರುತ್ತವೆಯೋ ಅವುಗಳನ್ನು ತಿದ್ದಿಕೊಂಡು ಮುಂದಕ್ಕೆ ಇಂಥ ಲೋಪದೋಷಗಳನ್ನು ಮಾಡದಂತೆ ಅವುಗಳನ್ನು ತಡೆಗಟ್ಟುವುದಕ್ಕಾದರೂ ಸಾಧ್ಯವಾಗುತ್ತಲ್ಲವೇ ಎನ್ನುವ ದೃಷ್ಟಿಯಿಂದ ನಾನೀಗ ಚರ್ಚೆಯನ್ನು ಮಾಡುತ್ತಿರುವುದಾಗಿದೆ. ಇದೇ ಸಂದರ್ಭದಲ್ಲಿ Public Service Commission (Conduct of Business and Additional Functions Bill) ಸಹ ಈಗ ಸಭೆಯ ಮುಂದಿದೆ. ಈ ಸರ್ವೀಸಿನ ಕೆಲಸಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದೊಂದು ಹುದ್ದೆಗೂ ಅವರು ಅನುಸರಿಸುತ್ತಿರುವ ನೀತಿವಿಧಾನಗಳ ವಿಚಾರವಾಗಿ ಇದೇ ಸಭೆಯ ಮುಂದೆ ಪ್ರತಿಯೊಂದು ಅಧಿವೇಶನದ ಕಾಲದಲ್ಲೂ ಪ್ರಶ್ನೆಗಳ ರೂಪವಾಗಿಯೋ ಅಥವಾ ಮತ್ತೆ ಯಾವುದಾದರೊಂದು ರೀತಿಯಲ್ಲಿಯೋ ಈ ವಿಚಾರ ಚರ್ಚೆಯಾಗುತ್ತಲೇ ಇದೆ. ವರದಿಯನ್ನು ಒಳಹೊಕ್ಕು ನೋಡುವುದಕ್ಕೆ ಹೋದರೆ ಇದರಲ್ಲಿ ಎಲ್ಲಾ ಕಡೆಗಳಲ್ಲೂ ದೋಷವಿರಬಹುದು. ಅದು ಇಂದಲ್ಲ ನಾಳೆ ಸರಿಹೋಗಬಹುದು-ಆ ಮಾತು ಬೇರೆ. ಆದರೆ ಈ ವರದಿಗಳನ್ನು ಏಕೆ ಈ ಸಭೆಯ ಮುಂದಿಡಲಿಲ್ಲವೆಂದು 1959ನೆಯ ಬಜೆಟ್ ಅಧಿವೇಶನ ಕಾಲದಲ್ಲಿ ಒತ್ತಾಯ ಮಾಡಿದ್ದಾಯಿತು, ಅನಂತರ ಮತ್ತೊಂದು ಅಧಿವೇಶನ ಬಂತು. ಅದರಲ್ಲೂ ಒತ್ತಾಯಮಾಡಿದನಂತರ ಈಗ ಈ ಅಧಿವೇಶನದಲ್ಲಿ ಇಂದು ಚರ್ಚೆಗೆ ಬಂದಿದೆ. ಆದರೆ ಈಗ ಈ ವರದಿಯ ಮೇಲೆ ಸಂಪೂರ್ಣ ಚರ್ಚೆಗೆ ಅವಕಾಶ ಕೊಡದಹೋದರೆ ಈ ಚರ್ಚೆಯಿಂದೇನು ಪ್ರತಿಫಲ ಹಳಿನಬೇಕೆಂದಿದೆಯೋ ಆ ಉದ್ದೇಶ ಸಫಲವಾಗುವುದಿಲ್ಲ ವೆಂಬುದು ಖಚಿತವಾದ ಅಭಿಪ್ರಾಯ. ಈಗ ನಿಯಮಿತವಾಗಿರತಕ್ಕ ಕಾಲ ಮತ್ತು ಈ ನೀತಿ-ನಿಯಮಗಳ ಚೌಕಟ್ಟಿನಲ್ಲಿ ಈ ಮೂರು ವರ್ಷಗಳ ವರದಿಯ ಮೇಲೆ ಮಾತನಾಡಿ ನಾವು ಸರ್ಕಾರಕ್ಕಾಗಲೀ ಅಥವಾ ಆ ಪಬ್ಲಿಕ್ ಸರ್ವೀಸ್ ಕಮಿಷನಿನವರಿಗಾಗಲಿ ಒಂದು ಸಲಹೆಯನ್ನು ನೀಡಿ ಈ ಎರಡನ್ನೂ ಒಂದು ಹಾದಿಗೆ ತರಬೇಕೆಂದರೆ ಅದಂತೂ ಖಂಡಿತ ಸಾಧ್ಯವಾಗಲಾರದು. ಈ ದಿವಸ ಸರ್ಕಾರದವರಿಗೂ ಆ ಪಬ್ಲಿಕ್ ಸರ್ವೀಸ್ ಕಮೀಷನ್ನಿನವರಿಗೂ ಎಲ್ಲಿ ಬಾಂಧವ್ಯ ತಪ್ಪಿಹೋಗಿದೆ; ಸರ್ಕಾರ ತನ್ನ ನೀತಿ-ನಿಯಮಗಳಲ್ಲಿ ತಪ್ಪಿರುತ್ತದೆಯೇ ಅಥವಾ ಆ ಪಬ್ಲಿಕ್ ಸರ್ವೀಸ್ ಕಮಿಷನ್ ತನ್ನ ನೀತಿ ನಿಯಮಗಳಲ್ಲಿ ತಪ್ಪಿದೆಯೇ ಎನ್ನುವುದನ್ನು ಕಂಡುಹಿಡಿಯುವಷ್ಟು ವ್ಯವಧಾನ ಈಗಿಲ್ಲವುದಿಲ್ಲ. ಈ ಚರ್ಚೆಗೆ ಇಂಥಾ ಇಕ್ಕಟ್ಟನ್ನುಂಟುಮಾಡಿರುವುದು ಸರ್ವಥಾ ಸರಿಯಾದುದಲ್ಲವೆಂಬುದು ನನ್ನ ಅಭಿಪ್ರಾಯ. ಈ ದಿವಸ ನ್ಯಾಯಸ್ಥಾನದಲ್ಲಿ ಕೆಳಕೋರ್ಟಿನಲ್ಲಿ ಕೊಡತಕ್ಕ ತೀರ್ಪಿನ ಸಮರ್ಪಕವಾಗಿಲ್ಲದಿದ್ದರೆ ನಾವು ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿಗೆ ಅಪೀಲ್ ಹೋಗುತ್ತೇವೆ. ಹಾಗೆಯೇ ಈ ದಿವಸ ಆ ಪಬ್ಲಿಕ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸರ್ವೀಸ್ ಕಮಿಷನ್ನಿನವರು ಮಾಡತಕ್ಕ ಕೆಲಸ ಕಾರ್ಯಗಳು ಸಮರ್ಪಕವಾಗಿಲ್ಲದಿದ್ದರೆ-ನಿರಿಯಾಗಿಲ್ಲದಿದ್ದರೆ ಆಗ ನಾವು ಆ ತೀರ್ಮಾನಗಳು ಸರಿಯಾಗಿಲ್ಲವೆಂದು ಯಾರ ಮುಂದೆ ಹೋಗಿ ಹೇಳಿಕೊಳ್ಳಬೇಕು? ಆ ಕಮಿಷನ್ನಿನವರ ಪ್ರೊಟೆಕ್ಷನ್‌ಗೆ ಈ ಸಭೆಯಲ್ಲಿ ಯಾರೂ ಇಲ್ಲದಿರುವುದರಿಂದ ಆ ಕಮಿಷನ್ನಿನ ಸದಸ್ಯರ ಬಗ್ಗೆ ಇಲ್ಲಿ ನಾವುಗಳ್ಯಾರೂ ಟೀಕೆ ಮಾಡಬಾರದೆಂದು ಈಗಾಗಲೆ ಅಧ್ಯಕ್ಷರು ರೂಲಿಂಗ್ ಬೇರೆ ಕೊಟ್ಟಿದ್ದಾರೆ. ಆದುದರಿಂದ ಈ ವರದಿಗಳನ್ನು ಈ ದಿವಸ ನಾವು ಒಂದು ಮೊಗುಂ ಆದ ರೀತಿಯಲ್ಲಿ ಚರ್ಚೆ ಮಾಡುವುದರಿಂದ ನಿನೂ ಸಾರ್ಥಕವಾಗುವುದಿಲ್ಲವೆಂದು ನನಗನಿಸುತ್ತಿದೆ. ಈ ಹಿಂದೆ ಇದೇ ಸಭೆಯಲ್ಲಿ ಇದೇ ಸಭೆಯ ಮಾನ್ಯ ಸದಸ್ಯರಾದ ಶ್ರೀ ಜಿ. ಶಿವಪ್ಪನವರು ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪರ್ಸೊನೆಲ್ ವಿಚಾರವಾಗಿ ಒಂದು ಪ್ರಶ್ನೆಯನ್ನು ತಂದಿದ್ದಾಗ ಇಲ್ಲಿ ಅದರಿಂದ ಉದ್ಭವವಾಗತಕ್ಕ ಮೂರು ಪ್ರಶ್ನೆಗಳನ್ನು ಹಾಕತಕ್ಕ ಕಾಲದಲ್ಲಿ ಅಧ್ಯಕ್ಷರೊಂದು ರೂಲಿಂಗ್‌ಕೊಟ್ಟರು.ಅದರ ಬಗ್ಗೆ ನಾನು ನೂರಾವರ್ತಿಗೂ ಹೆಚ್ಚು ಸಾರಿ ಆ ಸಂಬಂಧವಾಗಿ ಎತ್ತಿದ್ದ ಪ್ರಶ್ನೆಗೆ ಇಲ್ಲಿಯ ತನಕ ನನಗೆ ಅಧ್ಯಕ್ಷರಿಂದ ಇನ್ನೂ ರೂಲಿಂಗ್ ಬಂದಿಲ್ಲ. ಈ ಹಿಂದೆ ಇದೇ ಸಭೆಯ ಮುಂದೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಸಂಬಂಧಪಟ್ಟ ಒಂದು ಮಸೂದೆ ಬಂದಿದ್ದಾಗಲೇ-ಆಗ ಮಾತನಾಡುತ್ತಿದ್ದಾಗ ನನ್ನ ಮನಸ್ಸಿಗೊಂದು ವಿಚಾರ ಹೊಳೆಯಿತು. ಅದೇನೆಂದರೆ-ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ ಆ ಪಬ್ಲಿಕ್ ಸರ್ವೀಸ್ ಕಮಿಷನ್ ಮತ್ತು ಈ ಸರ್ಕಾರ-ಈ ಎರಡು ದೇಶ ಏನೊಂದು ನಿರೀಕ್ಷಣೆಯಿಟ್ಟುಕೊಂಡಿತ್ತೋ ಅದಕ್ಕೆ ತಕ್ಕಂತೆ ಕೆಲಸಮಾಡುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ದಿವಸ ಆ ಪಬ್ಲಿಕ್ ಸರ್ವೀಸ್ ಕಮೀಷನ್ನಿನವರು ದೇಶದ ಎಲ್ಲಾ ಭಾಗಗಳ ಜನರಿಗೂ ಒಂದು ಸಮಾಧಾನಕರವಾಗತಕ್ಕ ರೀತಿಯಲ್ಲಿ ಅವರು ನಿಜವಾಗಿಯೂ ಕೆಲಸಮಾಡುತ್ತಿದ್ದಾರೆಯೇ, ಅವರ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿವೆಯೇ ಎಂದರೆ-'ಇಲ್ಲ' ಎಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ಆದರೆ ಸರ್ಕಾರದವರು ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಆಡಳಿತದಲ್ಲಿ ಕೈಹಾಕಿಲ್ಲ, ಅವರಿಗೆ ಯಾವ ತೊಂದರೆಯೂ ಸರ್ಕಾರದ ವತಿಂದ ಆಗಿಲ್ಲ; ಅವರ ದಿನವಹಿ ಆಡಳಿತದಲ್ಲಿ ಸರ್ಕಾರದವರು ಪ್ರವೇಶಿಸಿಲ್ಲವೆಂದು ಹೇಳತಕ್ಕ ಧೈರ್ಯ ಆ ಎದೆಗಾರಿಕೆ ಸರ್ಕಾರಕ್ಕಿದೆಯೇನು? ಅಂಥ ಧೈರ್ಯವಿಲ್ಲವೆಂಬುದಕ್ಕೆ ಈ ವರದಿಯಲ್ಲಡಗಿರತಕ್ಕ ವಿಚಾರಗಳೇ ಸಾಕ್ಷಿಯಾಗಿವೆ. ಆದರೆ ದೇಶ ಇತ್ತೀಚೆಗೆ ವಿಶಾಲವಾದಮೇಲೆ ಅದಕ್ಕೆ ತಕ್ಕಂತೆ ಈ ಆಫೀಸಿನ ಬಲವೂ ಹೆಚ್ಚಿರಬಹುದಾಗಿತ್ತು. ಈ ದಿವಸ ಬೆಳಗ್ಗೆ ವಾಯು ವೇಗದಲ್ಲಿ ಹಳೆಯ ಮೈಸೂರಿನವರು ನಾಕರಿಯ ವಿಚಾರದಲ್ಲಿ ಮುಂದೆ ಹೋಗುತ್ತಿದ್ದಾರೆ ಇನ್ನುಳಿದ ಸೌದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕ, ಮದ್ರಾಸ್ ಕರ್ನಾಟಕ ಮತ್ತು ಕೊಡಗು ಗಳಿಗೆ ನರಿಯಾದ ಪ್ರಾತಿನಿಧ್ಯಕೊಟ್ಟಿಲ್ಲವೆಂಬ ಪ್ರಶ್ನೆ ಬಂದಿದ್ದಾಗ ಮೊದಲು ಈ ಕೆಲಸ It was moving like mercury and afterwards it was oving like a Jet plane ಎಂದು ಹೇಳುತ್ತಿದ್ದರು.

ಇದನ್ನೆಲ್ಲಾ ನೋಡಿದರೆ ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನಿಂದ ನ್ಯಾಯ ದೊರೆಯುತ್ತಿಲ್ಲವೆಂಬ ಪ್ರಶ್ನೆಯೊಂದುಕಡೆಗಿರಲಿ-ಅಂತೂ ಈಗಿರತಕ್ಕ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕೆಲಸ ಜಾಸ್ತಿಯಾಗಿದೆ ಎನ್ನುವುದು ಗೊತ್ತಾಗುತ್ತದೆ. ಅದನ್ನು ಬಡಾಯಿ ನಡೇಕೆಂಬ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಏಕಾಭಿಪ್ರಾಯದಿಂದ ತಿಳಿಸಿರತಕ್ಕ ವಿಚಾರದಲ್ಲಿ ಒಂದು ಉದ್ಯೋಗವಾಗಲೀ ಅಥವಾ ಉತ್ಪ್ರೇಕ್ಷೆಯಾಗಲೀ ಇರುವುದಿಲ್ಲ. ಅವರು ಮಾಡತಕ್ಕ ಕೆಲಸದಿಂದ ದೇಶಕ್ಕೊಂದು ನ್ಯಾಯ ದೊರೆಯುವಂತಿರಬೇಕು.

ಈ ದಿವಸ ಸರ್ಕಾರದವರು ನೇಮಿಸಿರತಕ್ಕ ಆ ತ್ರಿಮೂರ್ತಿಗಳಿಂದ ದೇಶಕ್ಕಾಗಲೀ ಜನಗಳಿಗಾಗಲೀ ಅಥವಾ ಅದನ್ನು ನೃಷ್ಟಿಸಿರತಕ್ಕ ಸರ್ಕಾರಕ್ಕಾಗಲೀ ಒಂದು ಒಳ್ಳೆಯದಾಗುತ್ತದೆಂದು ಈ ಸರ್ಕಾರ ವೇನಾದರೂ ಭಾವಿಸಿದ್ದರೆ ಅಥವಾ ನಿರಿಕ್ಷಿಸಿದ್ದರೆ ಅದು ತೀರಾ ನಿರಾಶಾದಾಯಕವಾದ ಭಾವನೆಯೆಂದು ತಿಳಿಸದೆ ವಿಧಿಯಿಲ್ಲ. ಈ ದಿವಸ ಈ 3 ವರ್ಷಗಳ ವರದಿಯಲ್ಲಿ ಆ ಕಮಿಷನ್ನಿನವರು ನಡೆಸಿರತಕ್ಕ ಕೆಲಸ ಕಾರ್ಯಗಳು ಹೆಂಚಿರತಕ್ಕ ಹುದ್ದೆಗಳು, ಸರ್ಕಾರದವರು ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಂದ ಅಭಿಪ್ರಾಯ ಪಡೆಯಲು ನಡೆಸಿರತಕ್ಕ ಕಾಗದ ಪತ್ರಗಳ ವ್ಯವಹಾರ ಮತ್ತು ಆ ಸಂಬಂಧದಲ್ಲಿ ಆ ಕಮಿಷನ್ನಿನವರು ಕೊಟ್ಟಂಥ ಅಭಿಪ್ರಾಯ ಇವುಗಳನ್ನೆಲ್ಲ ನೋಡಿದರೆ ಈ ಕೆಲಸಗಳೆಲ್ಲ ಬಹಳ ಮಂದಗತಿಯಲ್ಲಿ ನಡೆಯುತ್ತಿವೆ ಎಂದು ಕಂಡುಬರುತ್ತದೆ. ಇದಕ್ಕೆ ಕಾರಣ ಅಲ್ಲಿ ಸಾಕಷ್ಟು ಸಿಬ್ಬಂದಿಯಿಲ್ಲ. ಆ ಸಿಬ್ಬಂದಿಯನ್ನು ಹೆಚ್ಚಿಸಿದರೆ ಅದು ನರಿಹೋಗಬಹುದೆಂದು ಹೇಳಬಹುದು. ಆದರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಕಡೆಗೆ 1954-55 1955-56 ಮತ್ತು 1956-57 ಈ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಕೆಲಸಗಳಿವೆ ಎಷ್ಟೆಷ್ಟು ಅರ್ಜಿಗಳು ಬಂದಿರುತ್ತವೆಂಬುದನ್ನು ನೋಡಿದರೆ ಈ ಕಛೇರಿಗೆ ಮೊದಲಿಗಿಂತಲೂ ಈ ದಿವಸ ಕೆಲಸ ಜಾಸ್ತಿಯಾಗಿದೆಂಬುದು ಈ ಅಂಕಿ ಅಂಶಗಳಿಂದಲೇ ವೇದ್ಯವಾಗುತ್ತದೆ. ಈ ಕೆಲಸಗಳಿಗಾಗಿ ಬರತಕ್ಕ ಅರ್ಜಿಗಳನ್ನು ಒಂದು ಟೆಕ್ನಿಕಲ್ ಗ್ರೌಂಡ್ ಮೇಲೆ ವಜಾ ಮಾಡುವ ಹಾಗಿದ್ದರೆ ಈ ಆಫೀಸಿಗೆ ಇಂಥ ಜಾಡ್ಯ ಬರುವುದಕ್ಕೆ ಅವಕಾಶವಿರಲಿಲ್ಲ. ಯಾವುದಾದರೊಂದು ಟೆಕ್ನಿಕಲ್ ಗ್ರೌಂಡ್ ಮೇಲೆ ಅರ್ಜಿಗಳನ್ನು ವಜಾ ಮಾಡಿದ್ದರೆ ಅದರಲ್ಲೇನೂ ತಪ್ಪಿಲ್ಲ. ಆದರೆ ಅದಷ್ಟೂ ಎಲಿಮಿನೇಟ್ ಮಾಡೋಣ ಎಂದು ಸಾಕಷ್ಟು ಸಿಬ್ಬಂದಿಯಿಲ್ಲದೆ ಮಾಡಿದ್ದರೆ ಹಾಗೂ ಆಗಿರಬಹುದು. ಆದುದರಿಂದ ಈ ಕಮಿಷನ್ನಿನಿಂದ ಜನರಿಗೊಂದು ನ್ಯಾಯ ದೊರೆಯುವಂತೆ ಕೆಲಸ ಮಾಡಬೇಕಾಗಿದ್ದರೆ ಸರ್ಕಾರದವರು ಮೊದಲು ಅಲ್ಲಿಗೆ ಸಾಕಷ್ಟು ಸಿಬ್ಬಂದಿಯನ್ನು ಒದಗಿಸಿ ಆ ಕಮಿಷನ್ನನ್ನು ಮೊದಲು ಎಕ್ಸ್‌ಪ್ಯಾಂಡ್ ಮಾಡಬೇಕು. ಅದಕ್ಕೆ ಸಾಕಷ್ಟು ಆಧಾರಗಳಿವೆ. ಈ ದಿವಸ ಸರ್ಕಾರದವರಿಗೇನು ದೇಶ ಇಮ್ಮಡಿಯಾಗಿರುವ ಅಂಶ ಗೊತ್ತಿಲ್ಲವೇನು? ಆದುದರಿಂದ ಈ ಅಧಿವೇಶನ ಮುಗಿದ ಕೂಡಲೇ ಸರ್ಕಾರದವರು ಕುಳಿತುಕೊಂಡು ಈ ಮಂಡಳಿಯನ್ನು ಕನಿಷ್ಪಪಕ್ಷ 5 ಜನ ಮೆಂಬರುಗಳಿರುವಂತೆ ತೀರ್ಮಾನ ಕೈಗೊಂಡು ಅದರಂತೆ ಇದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ನಾನೀಗ ಈ ವಿಚಾರವನ್ನು ಕೇವಲ ದೇಶದ ಒಂದು ಹಿತದೃಷ್ಟಿಯಿಂದಲೇ ಹೇಳುತ್ತಿಲ್ಲ. ಸರ್ಕಾರದವರ ಹಿತದೃಷ್ಟಿಯಿಂದ ಕೂಡ ಇದು ಅತ್ಯಗತ್ಯವೆಂದು ಹೇಳುತ್ತೇನೆ. ಆ 5 ಜನ ಸದಸ್ಯರ ಪೈಕಿ ಒಬ್ಬರು ಹರಿಜನರ ಪ್ರತಿನಿಧಿಗಳಿರಲಿ. ಆದರೆ ಹರಿಜನಕ್ಕೆ ಉಪಕಾರಿಗಳಾಗಿರದ ಯಾರೋ ಒಬ್ಬರನ್ನು

ಸರ್ಕಾರದವರು ತಮ್ಮ ಅನುಕೂಲಕ್ಕಾಗಿ ನೇಮಿಸುವುದಾದರೆ ಅದರಿಂದ ಆ ಜನಾಂಗಕ್ಕೇನೂ ಪ್ರಯೋಜನವಾಗುವುದಿಲ್ಲ. ಈ ರೀತಿಯಾಗಿ ಇನ್ನು ಒಂದು ತಿಂಗಳೊಳಗಾಗಿ ಇದನ್ನು ಎಕ್ಸ್‌ಪ್ಯಾಂಡ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಆ ಮಂಡಳಿಯಲ್ಲಿ ಹೆಂಗಸರಿರುವುದು ಬೇಡವೋ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮತಿ ನಾಗರತ್ನಮ್ಮನವರ ನಲಹೆಯನ್ನು ನಾನು ಅನುಮೋದಿಸುವುದಷ್ಟೇ ಅಲ್ಲ, ಶ್ರೀಮತಿ ನಾಗರತ್ನಮ್ಮನವರು ತಮ್ಮ ಈ ಸದಸ್ಯ ಸ್ಥಾನಕ್ಕೆ ರಾಜಿನಾಮೆ ಕೊಡಲಿ, ಸರ್ಕಾರದವರೂ ಕೂಡ ಇವರ ಬಗ್ಗೆ ದೊಡ್ಡ ಮನಸ್ಸು ಮಾಡಿ ಆ ಕಮಿಷನ್ನಿನಲ್ಲರ ತಕ್ಕ 5 ಜನ ಸದಸ್ಯರ ಶ್ಯೆಕೆ ಇವರೂ ಒಬ್ಬರು ಇರುವಂತೆ ನೇಮಕ ಮಾಡಬೇಕೆಂದು ಸರ್ಕಾರದಪರಿಗೆ ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಸರ್ಕಾರದವರಿಗೆ ಕೆಲವು ವಿಚಾರಗಳಲ್ಲಿ ಇತ್ತಿರತಕ್ಕ ನಲಹೆಗಳ ಬಗ್ಗೆ, ಹಾಗೂ ಬುದ್ಧಿವಾದಗಳ ಬಗ್ಗೆ ಸರ್ಕಾರ ಎಷ್ಟರಮಟ್ಟಿಗೆ ಅವುಗಳನ್ನು ಪಾಲಿಸಿಕೊಂಡು ಬಂದಿದೆ ಎನ್ನುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಶ್ರೀಪಾರ್ ಮರಿಯಪ್ಪನವರು ಈಗ ತಾನೇ ಏತಕ್ಕೆ ಹೊರಗೆ ಹೋದರೊ ಗೊತ್ತಿಲ್ಲ. ಅವರೀಗ ಇರಬೇಕಾಗಿತ್ತು. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಶಿಫಾರ್ಸು ಮಾಡಿದ್ದರೂ ನಿಮಗೆ ಸ್ಯೂಟಬಲ್ ಕ್ಯಾಂಡಿಡೇಟ್ ಇರಲಿಲ್ಲವೆಂದು ಹೇಳಿ ಅದಕ್ಕೊಕ್ಕೇಸ್ಕರ ಆ ನೌಕರಿಯನ್ನು ಫಿಲಪ್ ಮಾಡುವುದೇಇಲ್ಲ. ಅವರು ಮಾಡಿದ ಶಿಫಾರ್ಸನ್ನು ತಾವು ಒಪ್ಪುವುದೇಇಲ್ಲ. ಸರ್ವಿಸ್‌ನಲ್ಲರುವವರಿಗೆ ಎಕ್ಸ್‌ಟೆಷ್ಷನ್ ವಿಷಯದ ಬಗ್ಗೆ ಚಿಕ್ಕವರು ಮುಂದೆ ಮುಂದೆ ಬರಬೇಕು ಎಂದು ತಾವೇ ಹೇಳಿದ್ದೀರಿ. ಅಂತಹ ಧೋರಣೆ ಇಲ್ಲದೆ ಹೋದರೆ ಹೇಗೆ? ರಿಟೈರ್ ಆದವರಿಗೇ ಎಕ್ಸ್‌ಟೆಷ್ಷನ್ ಕೊಡುತ್ತಾ ಹೋದರೆ ಹೇಗೆ?

ಶ್ರೀ ಟಿ. ಮರಿಯಪ್ಪ.—ಅವರು ಜಾಸ್ತಿ ಸರ್ವಿಸ್ ಮಾಡುವುದಕ್ಕೆ ಎಕ್ಸ್‌ಟೆಷ್ಷನ್ ಕೊಡಿ ಎಂದು ಹೇಳಿದ್ದರೂ ನಾವು ಆ ರೀತಿ ಕೊಡಲಲ್ಲ.

Sri C. J. MUCKANNAPPA.—I am against extensions. However eminent a person may be and whatever be the technical knowledge he possesses I am against his extensions. Government is, thereby, coming in the way of the prospects of the younger generation. Government should stop granting extensions at once. Because a person is Sri T. Mariappa's man, or Sri Kadidal Manjappa's man or Sri Jathi's man, he should not be given extensions..... ನೀವು ಎಕ್ಸ್‌ಟೆಷ್ಷನ್ ಕೊಡುವುದನ್ನು ನೋಡುತ್ತಿದ್ದೇನೆ, 6 ತಿಂಗಳು, 1 ವರ್ಷ, 1½ ವರ್ಷ, ಮತ್ತೆ 6 ತಿಂಗಳು, 3 ತಿಂಗಳು ಹೀಗೆ ಜೀವದಾನ ಮಾಡಬೇಡಿ. ಈ ರೀತಿ ಜೀವದಾನ ಮಾಡುತ್ತಾ ಹೋದರೆ ನಿಮಗೆ ಒಳ್ಳೆಯದಾಗುವುದಿಲ್ಲ; ಸರಿಯಾದುದಲ್ಲ. ನಿಮಗೆ ಬೇಕಾದವರಿಗೆ ಎಕ್ಸ್‌ಟೆಷ್ಷನ್ ಕೊಡುವುದು ಇನ್ನೂ ಚೆನ್ನಾಗಿರುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ನಾವು ನಿಜವಾಗಿ ಈಗ ಸರ್ವಿಸ್‌ನಲ್ಲರುವವರ ವಿಷಯದಲ್ಲಿ ಯಾವ ರೀತಿಯಲ್ಲೂ ಕೈ ಹಾಕುವುದಿಲ್ಲ. ಆ ಬಗ್ಗೆ ಎಲ್ಲ ಅಂಕಿಅಂಶಗಳನ್ನೂ ಈಗ ಕೊಡುವುದಕ್ಕೆ ನಾವು ತಯಾರಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹಿಂದೆ ಮಂಡ್ಯ ಹೆಣ್ಣುಮಕ್ಕಳ ಶಾಲೆಯ ಪ್ರಿನ್ಸಿಪಾಲರ 600 ರೂಪಾಯಿ ನಂಬಳವಿರತಕ್ಕ ಒಂದು ಹುದ್ದೆಯನ್ನು ಒಳ್ಳೆಯ ಶುಭ ಮಹೂರ್ತದಲ್ಲಿ ಕ್ರಿಯೇಟ್ ಮಾಡಿದಿರಿ. ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪರ್‌ವ್ಯೂನಿಂದ ಆ ಕೆಲಸವನ್ನು ತೆಗೆಯಬೇಕೆಂದು ಹೇಳಿದಿರಿ. ಆ ಮೇಲೆ ಆ ನೌಕರಿಯನ್ನು ಹಿಂದಿದ್ದ ಚೀಫ್ ಸೆಕ್ರೆಟರಿಗೆ ಸಂಬಂಧಪಟ್ಟವರಿಗಾರಿಗೋ ಕೊಟ್ಟಿದ್ದೀರಿ. Is it not really a crime that the Government have committed? ನಾನು ಇದನ್ನು ಹೇಳಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಫಸ್ಟ್ ಡಿವಿಜ್ ಮತ್ತು ಸೆಕೆಂಡ್ ಡಿವಿಜ್, ಮತ್ತು ಗೆಜೆಟೆಡ್ ರ್ಯಾಂಕ್‌ಗಳ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೊಡಿ. You be a watchdog. ಈಗಿರುವುದನ್ನು ಈ ರೀತಿ ಮಾಡಿಫೈ ಮಾಡುವುದು ಸರಿ.

ಗೆಜೆಟೆಡ್ ಪೋಸ್ಟ್ ನೇಮಕವನ್ನು ನೀವು ಇಟ್ಟುಕೊಂಡು ನಾನ್-ಗೆಜೆಟೆಡ್ ಪೋಸ್ಟ್ಸ್ ನೇಮಕವನ್ನು ಅವರೆ ಮಾಡಲಿ ಎಂದರೆ ಅದು ಸರಿಹೋಗುವುದಿಲ್ಲ. ನಿಮಗೆ ಅಧಿಕಾರವಿದೆಯೆಂದು ನಿಮ್ಮ ಪ್ರಭಾವನ್ನು ಅಪರ ಮೇಲೆ ಬೀರುವುದು, ಬರೆಯನ್ನು ಬೀಸುವುದು ಸರಿಯಲ್ಲ. ಒಬ್ಬ ಡಿ.ಎಸ್.ಪಿ.ಯ ಹುದ್ದೆಯನ್ನು ನೀವು ಫಿಲಪ್ ಮಾಡಲು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ರೆಫರ್ ಮಾಡಿದಿರಿ. ಏತಕ್ಕೊಕ್ಕೇಸ್ಕರ ನೀವು ಅವರು ಶಿಫಾರ್ಸು ಮಾಡಿದವರನ್ನು ನೇಮಕ ಮಾಡುವುದಿಲ್ಲವೆಂದು ಹೇಳಿದಿರಿ? ತಾವು ಹೇಳಿದುದೆಲ್ಲಾ ಬರೆದಿಟ್ಟರೆ ಅದು ಒಂದು ದೊಡ್ಡ ಚರಿತ್ರೆಯೇ ಆಗುತ್ತದೆ. ಆ ಮೇಲೆ, ತಾವು ಐ.ಪಿ.ಎಸ್. ಆದವರು ಬೇಕೆಂದು ಶಿಫಾರ್ಸು ಮಾಡಿದ್ದಿರಿ. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಅವರನ್ನು ನೇಮಕ ಮಾಡಬಹುದೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಒಬ್ಬ ಡಿ.ಎಸ್.ಪಿ.ಯನ್ನು ಈಗ ರಿಟೈರ್ ಮಾಡಿದಿರಿ. But the matter is before the High Court and I do not want to discuss it further or give more information than this. ಸರ್ಕಾರ ಈ ಪಬ್ಲಿಕ್ ಕಮಿಷನ್ನಿಗೆ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಒಬ್ಬ ರಿಟೈರ್ಡ್ ಜೈ ಕೋರ್ಟ್ ಜಡ್ಜನ್ನೋ, ಒಬ್ಬ ಸೀನಿಯರ್ ಐ.ಎ.ಎಸ್. ಆಫೀಸರನ್ನೋ ಒಬ್ಬ ವಕೀಲರನ್ನೋ ಇಟ್ಟುಕೊಂಡು ನ್ಯಾಯಾಲಯದಲ್ಲಿ ವಾದ ಮಾಡಿದೆಂತೆ ಮಾಡುವುದು ಸರಿಯೇ?

Sri KADIDAL MANJAPPA.—Has this anything to do with the 1956-1957 report?

Sri C. J. MUCKANNAPPA.—This debate is to discuss the merits and demerits of recruitment, what the Commission has done and what the Government has done and whether the Government is right or the Public Service Commission is right. ಆದುದರಿಂದ ನಿಮ್ಮ ರಾಜ್ಯಾಂಗದ ಚೌಕಟ್ಟು ಮೀರಿ ಟೀಕೆ ಮಾಡುತ್ತಿಲ್ಲ. ಸರ್ಕಾರ ಈಚೆಗೆ ತನಗೆ ಪಬ್ಲಿಕ್ ಸರ್ವಿಸ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕಮಿಷ್ಟ್ ಮೈಲೇ ವಿಶೇಷವಾಗಿ ಕೈ ಹಾಕುತ್ತಿದೆ. ಮುಂದೆ ಅಂತಹ ಪಬ್ಲಿಕ್ ಸರ್ವಿಸ್ ಕಮಿಷ್ಟ್ ಏಕೆ ಇರಬೇಕು? ರಿಟೈರ್ಡ್ ಜಡ್ಜ್ ಅವರನ್ನೋ ಅಥವಾ ಲೀಗರ್ ಅಡ್ವೈಜರನ್ನೋ ಅಲ್ಲಿ ಇಟ್ಟು ಅವರು ಹೇಳಿದಂತೆ ಮಾಡಿ. ನೀವು ಎಷ್ಟೋ ಸಾರಿ ಹೈ ಕೋರ್ಟ್ ಆರ್ಡರಿಗೆ ಸ್ಟೇ ಆರ್ಡರ್ ಕೊಡುವವರು ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ಬಿಡುತ್ತೀರಾ? ಸರ್ಕಾರದ ಆದೇಶದ ಮೇಲೆ ಸರ್ವಿಸ್ ಕಮಿಷನ್ನಿನವರು ಸೆಕೆಂಡ್ ಡಿವಿಜನ್ ಕ್ಲಾರ್ಕ್ ಮತ್ತು ಫಸ್ಟ್ ಡಿವಿಜನ್ ಕ್ಲಾರ್ಕ್ ಹುದ್ದೆಗಳನ್ನು ಎನ್‌ಲಿಸ್ಟ್ ಮಾಡುತ್ತಾರೆ. One fine morning, the Chief Secretary to the Government advises this Government to issue an Official Memorandum ignoring such list of candidates.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್ ಕೊಟ್ಟರತಕ್ಕ ನಲಹೆಗಳನ್ನು ಕೆಲವು ಕಡೆ ಒಪ್ಪಿಕೊಂಡಿದ್ದೀರಿ; ಕೆಲವು ಕಡೆ ಒಪ್ಪಿಕೊಂಡಿಲ್ಲ. The very fundamentals are being defeated by this Government. They are cutting at the roots of the basic things.

ಅಧ್ಯಕ್ಷರು.—ಅದರಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ವಿಷಯದಲ್ಲಿ ಮಾತ್ರ ಹೇಳಬೇಕು.

Sri C. J. MUCKANNAPPA.—Sir, you are a very learned man. I need not tell you. It is not my intention to make allegations or level charges. I am just appealing to them not to get their hand soiled. ಪಬಿಕ್ ಸರ್ವಿಸ್ ಕಮಿಷನ್ನಿನಲ್ಲಿ ಎಲಿಸ್ಟ್ ಆಗಿ ಸಿ. ಆರ್. ಬಿ. ನಂಬರ್ ತೆಗೆದುಕೊಂಡು ಒಬ್ಬನಿಗೆ ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಹುದ್ದೆ ಇಪ್ಪತ್ತಿನವರೆಗೂ ಸಿಕ್ಕಲಿಲ್ಲ. ಅದಕ್ಕೋಸ್ಕರ ಪಬ್ಲಿಕ್ ಸರ್ವಿಸ್ ಕಮಿಷ್ಟ್ ಏತಕ್ಕೆ? ಒಬ್ಬನನ್ನು ಎಲಿಸ್ಟ್ ಮಾಡಿದ ಮೇಲೆ ಮತ್ತೆಸ್ಟೇ ಆರ್ಡರ್ ಕೊಡುವುದು ನ್ಯಾಯವೇ? ಸರ್ಕಾರ ಕೊಡಲೇ ಅಂತಹ ಅಫಿಷಿಯಲ್ ಮೆಮೊರ್ಯಾಂಡು ವಿತ್‌ಡ್ರಾ ಮಾಡಬೇಕು. ಮುಖ್ಯವಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಯಾರುಯಾರನ್ನು ಎಲ್ಲೆಲ್ಲಿ ಎಲಿಸ್ಟ್ ಮಾಡುತ್ತಾರೆಯೋ ಅಲ್ಲಲ್ಲಿ ಅವರನ್ನು ಪರ್ಮನೆಂಟಾಗಿ ಅಬ್ಸಾರ್ಬ್ ಮಾಡಬೇಕು ಎಂಬುದಾಗಿ ನಾನು ಸರ್ಕಾರಕ್ಕೆ ನಲಹೆಮಾಡುತ್ತೇನೆ. ನನ್ನ ಸೇಹಿತರಾದಂಥ ಶ್ರೀಮಾನ್ ಮೂಡಲಗಿರಿಗೌಡರು, ಮತ್ತು ಶ್ರೀ ಮಾನ್ ರಾಮಪ್ಪನವರು ಈ ವಿಚಾರವಾಗಿ ಈಗಾಗಲೇ ಮಾತನಾಡಿದ್ದಾರೆ. ಕೆಲಸ ಕೊಡುವಾಗ ಬ್ಯಾಕ್‌ವರ್ಡ್‌ಕ್ಲಾಸುಗಳನ್ನು ಹೀಗೆ ಡಿಟರ್‌ಮೈನ್ ಮಾಡಬೇಕು, ಮತ್ತು ಹಲಬಾರುವರ್ಗಗಳಲ್ಲಿರತಕ್ಕ ಅಂತರವನ್ನು ಹೇಗೆ ಕಡಮೆಮಾಡಬೇಕೆಂಬ ವಿಷಯಗಳಲ್ಲಿ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಒಂದು ಆದೇಶವನ್ನು ಕೊಡಬೇಕು. ಇಲ್ಲದಿದ್ದರೆ ಎಲ್ಲಾ ಕೆಲಸಗಳಿಗೂ ಪಟ್ಟಣಗಳಲ್ಲಿ ರುವವರನ್ನೇ ತರುತ್ತಾರೆ. ಅದಕ್ಕಾಗಿ ಸರ್ಕಾರದವರು ತೀವ್ರಯೋಚನೆ ಮಾಡಬೇಕು. ಬ್ಯಾಕ್‌ವರ್ಡ್‌ಕ್ಲಾಸಿನವರು ಒಂದು ವರ್ಷ, ಎರಡು ವರ್ಷಗಳ ತನಕ ಯಾವ ಆಫೀಸುಗಳಲ್ಲಾದರೂ ಕೆಲಸ ಮಾಡಿದ್ದರೆ ಅಂತಹವರ ವಿಷಯದಲ್ಲಿ ತೀವ್ರ ಗಮನ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಆಡಿಕ್ಟೇಟ್‌ರೆಪ್ಯುಟೇಷನ್ ನರ್ಕಾರೀ ನೌಕರಿಯಲ್ಲಿ ಸಿಕ್ಕುವ ಹಾಗೆ ನರ್ಕಾರದವರು ಪ್ರಯತ್ನ ಮಾಡಬೇಕೆಂದು ಸಭಾಧ್ಯಕ್ಷರ ಮೂಲಕ ನಾನು ಹೇಳುತ್ತೇನೆ.

ಮೊನ್ನೆತಾನೆ ಒಂದು ಸಣ್ಣ ವಿಷಯ ಬಂತು, ಪಬ್ಲಿಕ್ ಸರ್ವಿಸ್ ಕಮಿಷನ್ ನವರು 12ಪೇಜು ಬರೆದು ನರ್ಕಾರದವರು ಮಾಡಿರುವುದು ತಪ್ಪು ಎಂದು ಹೇಳಿದರು. ಇದು ಏನು ಧರ್ಮ? ಈ ರೀತಿ ಮಾಡಬಾರದು. ಎಲ್ಲರಿಗೂ ನ್ಯಾಯ ಸಿಕ್ಕಲಿ. ಎಷ್ಟು ದಿನ ನೀವು ಇಲ್ಲಿ ಇರುತ್ತೀರಿ? ಬೇರೆಯವರಿಗೆ ಜಾಗ ಬಿಟ್ಟು ಹೋಗುತ್ತೀರಿ. ಇರುವಷ್ಟು ದಿನ ದೇಶದ ಜನತೆಗೆ ಒಳ್ಳೆಯದನ್ನು ಮಾಡುವುದಕ್ಕೆ ಮನಸ್ಸು ಮಾಡಿ. ಒಬ್ಬ ಅಧಿಕಾರಿಗೆ ಶಿಕ್ಷೆ ಮಾಡುವುದು, ಇನ್ನೊಬ್ಬನಿಗೆ ಪ್ರಮೋಷನ್ ಕೊಡುವುದು ಆ ರೀತಿ ತಾಪು ಮಾಡಬೇಡಿ. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕೆಲಸ ಕಾರ್ಯಗಳಲ್ಲಿ ನೀವು ಕೈಹಾಕಬೇಡಿ. ಪಬ್ಲಿಕ್ ಸರ್ವಿಸ್ ಅನ್ನು ದೊಡ್ಡದು ಮಾಡಿ ಕೊನೆಯ ಪಕ್ಷ 5 ಜನ ನದಸ್ಯರನ್ನೊಳಗೊಂಡು ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ನಾದರೂ ಮಾಡಬೇಕು. ಈ ವಿಶಾಲ ಮೈಸೂರಿನಲ್ಲಿ ಎಲ್ಲಾ ಜನರಿಗೂ ತೃಪ್ತಿಯನ್ನುಂಟು ಮಾಡುವ ರೀತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುವಂತೆ ನರ್ಕಾರ ಮನಸ್ಸು ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before Hon'ble members proceed with the discussion, I have to make an announcement. The Minister for Public Works has offered to take the members of this House to Jog Falls on the 24th. The time will be intimated to members by my Office. Those who want to take advantage of the offer may please give their names as early as possible, if possible today itself, to the Office because arrangements will have to be made by the Government. The Government will bear the expenditure of the transport, accomodation and arrangements of the Members.

5-30 P.M.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ್).—ನಾನು ಈ ಕಮಿಷನ್ನಿನ ವರದಿಯ ಮೇಲೆ ನಾಲ್ಕು ಮಾತುಗಳನ್ನಾಡಬೇಕೆಂದು ಅಂದು ಕೊಂಡಿದ್ದೇನೆ. ಇದುವರೆಗೆ ನಮ್ಮ ಭಾಗದಲ್ಲಿ ಮೂರನೆಯ ವರ್ಗ, ಮತ್ತು ನಾಲ್ಕನೆಯ ವರ್ಗದ ಜನರನ್ನು ಅಲ್ಲಯೇ ನೇಮಿಸುತ್ತಿದ್ದರು. ಈಗ ಮೂರನೆಯ ವರ್ಗದ ನೌಕರರನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ನವರೇ ನೇಮಕ ಮಾಡುತ್ತಿದ್ದಾರೆ. ಈಗ ಬೆಳಗಾಂ ಡಿವಿಜನ್ನಿನ ಮೂರನೆಯ ಕ್ಲಾಸ್ ಪೋಸ್ಟಿಗೂ ಬೆಂಗಳೂರಿನಲ್ಲಿರುವ ಪಬ್ಲಿಕ್ ಸರ್ವಿಸ್ ಕಮಿಷನ್‌ನವರೇ ನೇಮಿಸುತ್ತಿದ್ದಾರೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ ಅವರನ್ನೆಲ್ಲಾ

ಬೆಳಗಾಂ ಡಿವಿಜನ್ನಿನಲ್ಲಯೇ ನೇಮಕ ಮಾಡುವ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ. ಬೊಂಬಾಯಿ ಏರಿಯಾದೊಳಗೆ ಹಿಂದೆ ಸ್ಕೂಲ್ ಬೋರ್ಡ್ ಎಂದು ಇತ್ತು. ಸ್ಕೂಲ್ ಬೋರ್ಡ್ ಚೇರ್ಮನ್, ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಮತ್ತು ಅಡ್ಮಿನಿಸ್ಟ್ರೇಷನ್ ಆಫೀಸರ್ ಹೀಗೆ ಮೂರು ಮಂದಿ ಕೂಡಿಕೊಂಡು ತಮಗೆ ಬೇಕಾದ ಎಲ್ಲರನ್ನೂ ನೇಮಿಸುತ್ತಿದ್ದರು. ಆ ರೀತಿ ಈಗಲೂ ಮಾಡುವುದು ಅವಶ್ಯ ಇದೆ. ಹಾಗೆ ಮಾಡದೆ ಇನ್ನು ಮುಂದೆ ಪಬ್ಲಿಕ್ ಸರ್ವಿಸ್ ಕಮಿಷನರವರೇ ಅವರನ್ನೆಲ್ಲಾ ನೇಮಕ ಮಾಡಬೇಕೆಂದು ಹೇಳಿದರೆ ಏನು ಸೌಕರ್ಯವಾಡಿದ ಹಾಗಾಯಿತು? ಹಾಗೆ ಮಾಡಬಾರದು. ಆದುದರಿಂದ ಮೂರನೆಯ ಕ್ಲಾಸ್ ಸರ್ವೆಂಟ್ಸ್‌ಅನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಿಸುವುದನ್ನು ತೆಗೆದು ಹಾಕಿ ಅದನ್ನು ಡಿವಿಜನಲ್ ಲೆವೆಲ್‌ನಲ್ಲೇ ಇಲ್ಲದಿದ್ದರೆ ಡಿಸ್ಟ್ರಿಕ್ಟ್ ಲೆವೆಲ್‌ದಲ್ಲಿ ನೇಮಕ ಮಾಡುವ ವ್ಯವಸ್ಥೆ ಮಾಡಬೇಕು.

ಎರಡನೆಯದು ಒಂದನೆಯ ವರ್ಗ, ಎರಡನೆಯ ವರ್ಗದವರನ್ನು ನೇಮಿಸುವಾಗ, ಈಗ ಇಂಥಾ ತಾರೀಖಿನೊಳಗೆ ಇಂಥಾ ಪೋಸ್ಟುಗಳಿಗೆ ನೇಮಿಸುತ್ತೇವೆಂ ಎ ಇರುತ್ತದೆ. ನಮ್ಮ ಕಡೆ ಇರುವವರಿಗೆ ಇದು ಗೊತ್ತಾಗುವುದಿಲ್ಲ. ಆದುದರಿಂದ ಆ ನೌಕರಿಗಳಿಗೆ ಅರ್ಜಿ ನಲ್ಲಿಸಲು ಕೊನೆಯ ಪಕ್ಷ ಮೂರು ತಿಂಗಳ ಅವಧಿಯನ್ನಾದರೂ ಕೊಡಬೇಕು. ಏನೇನು ನಿಯಮಗಳಿವೆ ಎನ್ನುವುದು ತಿಳಿಯುವುದಕ್ಕೇ ಆಗುವುದಿಲ್ಲ. ಬೇರೆ ಕಡೆ ಇದ್ದವರು ಏನುಮಾಡ ಬೇಕೊಗೊತ್ತಿರ. ವುದಿಲ್ಲ. ಬೆಂಗಳೂರಿನಲ್ಲದ್ದವರೇ ಬಂದು ಬಿಡುತ್ತಾರೆ. ಇಂಟಗ್ರೇಟೆಡ್ ಏರಿಯಾದಲ್ಲಿ ಇರುವವರು ಒಂದು ರೂಪಾಯಿ ಪೋಸ್ಟಲ್ ಸ್ಟಾಂಪು ಇಟ್ಟು ಅಪ್ಲಿಕೇಷನ್ ಕಳುಹಿಸುತ್ತಾರೆ. ಎಲ್ಲಾ ಮಾಡುವವರು ಸೆಕ್ರೆಟರಿಯವರೇ, ಇದು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮೆಂಬರುಗಳ ಗಮನಕ್ಕೇ ಹೋಗುವುದಿಲ್ಲ. ಗೌರ್ನ್‌ಮೆಂಟ್ ಸರ್ವೆಂಟ್‌ಗಳನ್ನು ಕನಿಷ್ಠ ಮೂರು ತಿಂಗಳ ಅವಧಿಯಲ್ಲೇ ನೇಮಿಸಬೇಕು. ಮೊದಲು ಒಂದು ಕೋಟಿ ಜನಸಂಖ್ಯೆ ಇದ್ದದ್ದು ಎರಡು ಕೋಟಿ ಜನಸಂಖ್ಯೆ ಆದರೂ, ದೇಶ ಬೆಳೆಯುತ್ತಿದ್ದರೂ, ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಮೂರು ಮಂದಿ ಇರುವುದನ್ನು ಜಾಸ್ತಿ ಮಾಡುವದಕ್ಕೆ ಏನು ತೊಂದರೆ? ಯಾರು ಅಧಿಕಾರದಲ್ಲಿದ್ದಾರೆಯೋ ಅವರಿಗೆ ಅಧಿಕಾರ ಬಿಡುವುದಕ್ಕೆ ಮನಸ್ಸುಬರುವುದಿಲ್ಲ.

ಇನ್ನು ಕೆಲವರು ಬಿಜಾಪುರಕ್ಕೆ ಹೋಗುತ್ತಾರೆ, ಗುಲ್ಬರ್ಗಾಕ್ಕೆ ಹೋಗುತ್ತಾರೆ, ಬೀದರ್‌ಗೆ ಹೋಗುತ್ತಾರೆ ಎಂದು ಹೇಳಿದರು. ಅಲ್ಲಿಗೆ ಹೋಗಲು ಬೇಡ ವೆಂದು ಹೇಳುವುದಿಲ್ಲ.

ಇನ್ನೊಂದು ಸಲಹೆಯನ್ನು ಮಾಡುತ್ತೇನೆ. ನಿಮಗೆ ಈಗ ಹತ್ತು post ಗಳನ್ನೂ ತುಂಬ ಬೇಕೆಂದಿದ್ದರೆ, P.S.C. ಕಡೆಯಿಂದ 25 ಹೆಸರುಗಳ ರೆಕಮೆಂಡೇಷನ್ನನ್ನು ತರಿಸಿಕೊಂಡು ಅದರಲ್ಲಿ ನಿಮಗೆ ಬೇಕಾದ ಹತ್ತು ಜನರನ್ನು ಚುನಾಯಿಸಿಕೊಂಡು ಆ ಸ್ಥಾನಗಳನ್ನು ತುಂಬಿಕೊಂಡರೆ ನೇಮಕಮಾಡಿದರೆ ಚೆನ್ನಾಗಿರುತ್ತದೆ, ಎನ್ನುತ್ತಾರೆ. P.S.C. ಯವರು ಕಳುಹಿಸಿದ 25 ಜನರ ಹೆಸರುಗಳ ಪೈಕಿ ಹತ್ತು ಜನರನ್ನು ಆರಿಸಿ ಚುನಾಯಿಸಲಾಗಿದೆ ಎಂದು ಹೀಗೆ ಮಾಡಿದರೆ ಬರೋಬ್ಬರಿ ಯಾಗಿರುತ್ತದೆ. ಸರಕಾರದವರ ಜವಾಬ್ದಾರಿ ಸರಿಯಾಗಿದೆ ಎಂದು ಲೆಜಿಸ್ಲೇಚರಿನಲ್ಲಿ ಹೇಳುವುದಕ್ಕೂ ಅನುಕೂಲವಾಗುತ್ತದೆ. ನೀವು ಏನು ಮಾಡುತ್ತಿದ್ದೀರೆಂದರೆ, ನಮ್ಮ ಜವಾಬ್ದಾರಿ P.S.C. ಯವರು ಆರಿಸಿ ಕಳುಹಿಸಿದಂತೆ ಮಾಡುತ್ತೇವೆಂದು ಹೇಳುತ್ತೀರಿ. ಸರಕಾರಕ್ಕೆ ಜವಾಬ್ದಾರಿ ಲೆಜಿಸ್ಲೇಚರಿನಿಂದ ಬರಬೇಕು. ಆದರೆ ಇಷ್ಟೇ post ಗಳನ್ನು ತುಂಬಿಸಲಿಕ್ಕೆ ಎಂದು ಮಾಡಿ ಹೆಚ್ಚಾಗಿ ತೆಗೆದುಕೊಂಡರೆ ಬೇರೆ ಪ್ರಕಾರ ಮಾಡಿಕೊಳ್ಳಲಿ.

ಶ್ರೀ ಟಿ. ಮರಿಯಪ್ಪ.—ಹೇಗೆ ಮಾಡಲಿಕ್ಕೆ ಸಾಧ್ಯ?

ಶ್ರೀ ಪಿ. ಜಿ. ಸಿದ್ಧಾಂತಿ.—Instructions ಕೊಡುವುದು ನಿಮ್ಮ ಕೈಯಲ್ಲಿರುತ್ತದೆ.

Sri T. MARIAPPA.—Whenever we make Rules for them, we must frame them and place them before this House. That is the difficulty.

ಶ್ರೀ ಪಿ. ಜಿ. ಸಿದ್ಧಾಂತಿ.—ಇನ್ನು communal G.O. ನಂತೆ 45% ಅಥವಾ 40% ಎಂದೋ ಕೊಡಿರಿ. ಹಾಗೇ ಇನ್ನಿತರ ಹಿಂದುಳಿದ ವರ್ಗದವರಿಗೆ ಇಷ್ಟುಮಂದಿಗೆ ಕೊಡಿ. ಬೇಡ ಎನ್ನುವುದಿಲ್ಲ. First Grade ಮತ್ತು Second Grade ಗಳಲ್ಲಿ ನೇಮಕ ಮಾಡುವಾಗ ಈ ಅಧಿಕಾರವನ್ನು ಸರಕಾರದವರು ಇಟ್ಟುಕೊಳ್ಳದೇ ಎಲ್ಲವನ್ನೂ P.S.C. ಗೇ ಕೊಟ್ಟಿದ್ದಾರೆ. ಇದೇನೋ ಬರೋಬರಿ. ಎಂದರೆ ಇದನ್ನೆಲ್ಲ ವಿಚಾರ ಮಾಡಿಕೊಂಡು ತಾವು ಎಲ್ಲ ಅಧಿಕಾರವನ್ನು P.S.C. ಮೇಲೆ ಬಿಟ್ಟುಬಿಟ್ಟರೆ ಅವರ ಮೇಲೆ ನಿಮಗೆ ಮಾತನಾಡಲಿಕ್ಕೇ ಬರುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಆ ರೀತಿ ಇದ್ದರೆ Supersede ಮಾಡಬೇಕಾದರೆ ಅವರಿಗೆ ಅಧಿಕಾರ ಬೇಕು.

ಶ್ರೀ ಪಿ. ಜಿ. ಸಿದ್ಧಾಂತಿ.—ಕಾನ್‌ಸ್ಟಿಟ್ಯೂಷನ್ ಪ್ರಕಾರ ಮಾಡಿ, ಇನ್ನು ಬರಿಯ Staff ಗಾಗಿ ರೊಕ್ಕ ಕೊಡುತ್ತೀರಿ. ಈ ರೀತಿ ಬರಿಯ Staff ಗಾಗಿ ರೊಕ್ಕ ಕೊಡುವುದಾದರೆ ಅದೇ ಬಹಳ ದೊಡ್ಡದ್ದಾಗುತ್ತದೆ.

ಎರಡನೆಯದು, ಈಚೆಗೆ ನಡೆದ B.D.O.ಗಳ ಮತ್ತು ತಹಸೀಲ್ದಾರುಗಳ ಚುನಾವಣೆಯು ಬೆಂಗಳೂರಿಗೆ ಬದಲಾಗಿ ಬಾಂಬೆ ಡಿವಿಜನ್ನಿನಲ್ಲಾಗಿದ್ದರೆ ಚೆನ್ನಾಗಿತ್ತು ಎಂದು ನಮ್ಮಲ್ಲಿ ಹೇಳಿದರು. ನಮ್ಮ ಕಡೆಗಳಲ್ಲಿ B.D.O. ಗಳ ಮತ್ತು ತಹಸೀಲ್ದಾರುಗಳ ಬಗ್ಗೆ Interview ಗಾಗಿ ಕರೆದುದರ ಬಗ್ಗೆ ನಮ್ಮ ಜನಕ್ಕೆ ಅಪ್ರೀತಿ ಹುಟ್ಟಿದೆ. ಇಷ್ಟು ಮಾತ್ರ ತಮ್ಮ ಮುಂದೆ ಇಟ್ಟಿದ್ದೇನೆ. ನಾನು ಯಾರೊಬ್ಬರ ಮೇಲೂ ಆರೋಪ ಮಾಡಬೇಕೆಂದು ಹೇಳುತ್ತಿಲ್ಲ. ಇಷ್ಟು ನಲಹೆಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅಲ್ಲದೆ ನಾನು ಇಲ್ಲಿರುವ ರಿಪೋರ್ಟಿನ ಮೇಲೆ ಏತಕ್ಕೆ ಮಾತನಾಡಲಲ್ಲ ಎಂದರೆ, ನಿಮ್ಮ ರಿಪೋರ್ಟ್‌ಗಳು 54-55, 56-57, ಮತ್ತು 57-58ಕ್ಕೆ ಸೇರಿದುವು. ನಾವು ಸ್ವಲ್ಪ ಭಾಗದವರು ಈ ಕಡೆಗೆ ಈಗತಾನೇ ಬಂದಿದ್ದೀವಿ. ಅದರಿಂದ ಇವು ಯಾವ ಯಾವ ಭಾಗದುವೋ ಏನೋ ಎನ್ನುವುದು ನಮಗೆ ಗೊತ್ತಾಗದೇ ಇರುವ ಕಾರಣ ನಾವೇನೂ ಮಾತನಾಡಲಲ್ಲ.

ಸರಕಾರದವರಲ್ಲಿ ನಾನು ಹೇಳಿರುವುದು ಮೂರು ಮಾತುಗಳನ್ನು. ಮೊದಲನೆಯದು, ಮೂರನೆಯ ವರ್ಗದವರ ನೇಮಕವನ್ನು ಈ ಕಮಿಷನ್ನಿಗೆ ಬಿಡಬೇಡಿರಿ; ಎರಡನೆಯದು, ಎರಡನೆಯ ವರ್ಗದ ಹುದ್ದೆಗಳಿಗೆ Interview ಗಳನ್ನು ಕರೆಯುವಾಗ ಮೂರರಿಂದ ಆರು ತಿಂಗಳು ಅವಧಿ ಕೊಡಬೇಕು, ಮತ್ತು ಕೊನೆಯದಾಗಿ ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿರುವ ಸದಸ್ಯರುಗಳ ಸಂಖ್ಯೆಯನ್ನು ಜಾಸ್ತಿ ಮಾಡಿರಿ. ಇದನ್ನು ತಮ್ಮ ಮುಂದೆ

(ಶ್ರೀ ಪಿ. ಜಿ. ಸಿದ್ಧಾಂತಿ)

ಇಷ್ಟಿದ್ದೇನೆ. ಸರಕಾರದವರು ಈ ಬಗ್ಗೆ ಏನಾದರೂ ಸರಿಯಾದ Instructions ಕೊಡಿರಿ ಎಂದು ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri S. D. KOTHAVALE (Chikodi).—Mr. Speaker, Sir, I had no idea of participating in this debate but for some observations made by the Hon'ble Member Sri Mudalagiri Gowda. In the course of his observations, he made reference to certain appointments like Tahsildars and Block Development Officers posts. The grievence was—I do not know to what extent it is correct, that certain persons who were not graduates were recruited from the Bombay area and Hyderabad area though it was the practice in the old Mysore area to recruit only graduates to these posts. I am speaking subject to correction that the basic qualification that was required was S.S.L.C. or S.S.C. The reason that I am going to state is in fact, some injustice has been done to some persons in the Bombay area who were already in the Revenue Department. Sir, after a person joins the Revenue Department in the Bombay area, even as a clerk, he is qualified for appearing for higher examination. It is a hard test; it includes all possible subjects for a competent officer in the Revenue Department. The Procedural Law, the Financial Code, Land Revenue Coed and such other subjects are to be studied. After a person passes this test and if he is eligible to be promoted to the post of Amildar and if he has a record showing his effeciency then he will be promoted and there are cases where such persons have gone up to the Deputy Collector's position and even Collector's position in the Bombay area. These people have shown great efficiency in work. Meaning no disrespect to the graduates, I make myself bold to say that these persons who have passed the Revenue Code Examination are better in their efficiency and better in the working and better in the discharge of their departmental work and their duties under law.

Therefore, if my information is correct, it is up to the Government to do justice to these men whose claim and efficiency should receive due recognition. Now, Sir, the position is, as a result of ignoring the qualifications of these men, a sort of discontent has been created in the services in the Belgaum area and they probably think that when their services and efficiency are not recognised, necessary incentive for good and efficient work has disappeared. That is the reason why discontent has been created. I hope the Government will take steps to undo the wrong which has been done. There is another important matter. It is wrong to ignore the services of persons who have been working in the Bombay Revenue Department and those persons who have been recruited under the old rules had chances of going to the top in the Department, or at least up to the District establishment of the Department by passing the qualifying examinations. The claims of these persons cannot be disregarded. The States Reorganisation Act has provided that the service conditions of servants coming from various areas cannot be ignored. They are guaranteed.

ಶ್ರೀ ಟಿ. ಎಸ್. ಮುಡಲಗಿರಿಗೌಡ.—ಯಾರಾದರೂ ಒಬ್ಬ ಕಾಂಪೌಂಡರ್ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾನೆ, ಚೆನ್ನಾಗಿ ಔಷಧಿ ಕೊಡುತ್ತಿದ್ದಾನೆ, ಎಂದು ಹೇಳಿದರೆ Can he become a doctor?

Sri S. D. KOTHAVALE.—I do not want to make any disrespectful references; as compared to Bombay servants, some of them are better than graduates. The analogy of compounder is very incorrect. A person who does work can qualify himself to do the work of a graduate; it is not a question of a compounder becoming a doctor. I hope the Government will take into consideration the provisions of the States Reorganisation Act and see that the guarantees and safeguards afforded by the States Re-organisation Act are not ignored but implemented.

Sri KADIDAL MANJAPPA.—The provisions of the States Re-organisation Act have not been ignored. We have never said that S.S.L.C. people should not be recruited as B.D.Os. and Tahasildars.

Sri S. D. KOTHAVALE.—It is very good of the Hon'ble Minister to have made this statement, for, of course, they have not been ignored on paper, but the conduct shows that they have

been completely ignored. The position under the Bombay Rules is that 50 per cent of the promotions to the Tahasildars and Assistant Collectors cadre were reserved for these men. That is according to the Bombay Government Resolution. I am just reminding the Hon'ble the Revenue Minister that these promotions in the Revenue Department were confined to the Revenue Branch and not to the Survey and Settlement Branch or some other branch which is part of the Revenue Department. Now, as orders of the present Government stand, the position appears to be that promotions to these posts are made up to 33 1/3 per cent and not only members of the Revenue Branch are allowed to compete for promotion, but servants in the Survey and Settlement are also allowed to contest. Therefore, the rights of these men are prejudiced. I hope the Hon'ble Revenue Minister will consider these points. I think due to some misfortune of these men, their cases have escaped the notice of the Government. I request the Government to see that at least now, justice is done to these unfortunate men. I wanted to stress some other points regarding framing of rules, merits, and other things. I will take some other opportunity. With these remarks, I request the Government to take due note of what I have said now.

Sri V. S. PATIL (Belgaum I).—Sir, the concept of democracy is based on five pillars. Originally, there was the conception of three pillars, executive, judiciary and legislative. According to our Constitution, two more pillars have been added, and that is, Accountancy and the fifth is the Public Service Commission. So far as the experience of the Public Service Commission of the State is concerned, it has become, in the view of the public, not a pillar but a 5th column. People are losing every faith in this body. I should like to substantiate my remarks by referring to the concept of this body. The Constitution under article 323(2) clearly lays down that the State Commission shall annually present its report and that that report has to be submitted to this Hon'ble House every year by the Hon'ble Governor. This is a constitutional provision that has been made under which we are all assembling here and discussing and deciding matters. What has the Public Service Commission of the State done? They have not submitted the report for the last three years. They have now brought it to the notice of this House. It clearly shows that the Public Service Commission is flouting the authority given to this Hon'ble House under the Constitution. So, I appeal to you, as the head of the House to see that the privileges granted to this House under the Constitution are safeguarded and nobody can come in the way of the privileges so far as our House is concerned. Then, regarding other matters which have been discussed so long on the floor of this House, so many members have suggested so many remedies and passed their remarks. I do not want to go in detail into all those remarks. But one thing I have pointed out. As stated by the last speaker, Sri Kothavale, from our experience in Bombay Karnatak, it is clear that this Public Service Commission is acting in a way which is completely prejudicial not only to the public but even to the services. So far as the recruitment of Tahsildars and B.D.Os. in my District of Belgaum is concerned, they have recruited five persons. What were those persons? They were previously clerks in that very District. There are remarks against those five persons that they should not be given responsible positions even as clerks. Those were the remarks on their work.

6 P.M.

There are allegations of corruption against some people and those people have found places over the persons who are known to be straightforward, intelligent and who have passed the examination. These very incidents go to show that the Public Service Commission is not working properly in consonance with the intention or the fundamentals that are incorporated in the Constitution. It is clear that they are going far astray, I do not know why; that was not the experience previously.

Sri T. MARIAPPA.—Is it during 1956-57 that those people were recruited ?

Sri V. S. PATIL.—I do not know exactly, but I tell you that proper persons have not been selected.

Mr. SPEAKER.—He wants to know whether they have been recruited after the re-organisation.

Sri V. S. PATIL.—After the re-organisation of the State.

Sri KADIDAL MANJAPPA.—They were recruited later and it does not come under this report.

Sri T. MARIAPPA.—If Hon'ble Members stray away from the Report and give instances, it would be difficult to verify and answer.

Sri V. S. PATIL.—This Report for 1956-57 is the last one given to us. This Report was presented by the Public Service Commission on the 17th April 1958. When the Public Service Commission submitted the Report in 1958, it is printed in 1959. This delay is intended to show that all such matters that have been done by the Public Service Commission could be forgotten by the Hon'ble Members of this House and there should be no ground for any complaint. Otherwise, they should have submitted the Report immediately after the year was over and you must be in possession of it at least within two or three months. That shows the irregularity committed by the Public Service Commission or even by the Government.

I should also like to point out that in the Appendix to the Report they have given a statement showing the number of appointments held by different communities; a big list of communities has been given, but unfortunately even after the re-organisation of the State, that is, 1st November 1956—that period was covered in the Report—there is no mention of Marathi at all. I do not know whether the Public Service Commission know that there is a community called Marathi. Government have fixed the percentage for the Marathi community in the services at 2·8, but in this Report there is not even a mention made of the community. That shows that either the Public Service Commission is ignorant or Government have not supplied that information and as a result of the omission, not a single person has been taken either as Sheristedar or even as Inspector. That is the grave injustice done to a particular community. I do not know why the Government is keeping silent over this matter. I had spoken of the subject previously and the Treasury Bench had assured me on that occasion that they would look into the matter; but even to-day no such step has been taken by the Government. I am not pressing the case of my community or any other community but so long as provisional orders are there, we have to bring them to the notice of the Government. I have the least objection to all castes being treated equally, except the Scheduled Castes and Scheduled Tribes and competitive examinations being held for recruitment of candidates to the several appointments. So long as the classification of communities is there, then I have to place this matter before this House and before the Government. I would request the Government to check the pockets of the candidates that come here for interview. The Anti-corruption Department should be instructed to see that no more money than for travelling, boarding, etc., at Bangalore, is brought by these candidates here. It is learnt that the candidates bring thousands of rupees with them. By so doing, the Government is creating an indirect mint from out of jobs. With these remarks, I close my speech.

†ಶ್ರೀ ಜಿ. ಬಿ. ಶಂಕರರಾವ್ (ಹರಿಕೆರೆರು).—ಮಾನ್ಯ ಸಭಾಧ್ಯಕ್ಷರೇ, ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಬೇರೆ ಬೇರೆ ವರ್ಗದ ನೌಕರಿಗಳಿಗೆ ಉಮೇದುವಾರರನ್ನು ಆರಿಸುವಾಗ ಆಗಿರತಕ್ಕ ಅನ್ಯಾಯಗಳನ್ನು ಮತ್ತು ಆಗತಕ್ಕ ಅನ್ಯಾಯಗಳನ್ನು ಸರಿಪಡಿಸುವುದಕ್ಕೂ ಮತ್ತು ಮೈಸೂರು ದೇಶದ ಎಲ್ಲ ಪ್ರಜೆಗಳಿಗೂ ನ್ಯಾಯವಾಗಿ ಸಿಕ್ಕಬೇಕಾದ ಸಂಖ್ಯೆಯಲ್ಲಿ ಸಾಕಷ್ಟು ನೌಕರಿಗಳು ಸಿಕ್ಕುತ್ತಿಲ್ಲ ಎನ್ನತಕ್ಕ ಭಾವನೆ ಬಂದು ಈ ಸಭೆಯಲ್ಲಿ ಈ ವಿಚಾರಗಳು ಮೇಲಿಂದ ಮೇಲೆ ಪ್ರಸ್ತಾಪವಾಗುತ್ತಲೇ ಬಂದಿವೆ. ಈಗ್ಗೆ ಕಳೆದ ಎರಡು ವಾರಗಳಲ್ಲಿ ಎರಡು-ಮೂರಾವರ್ತಿ ಈ ಪ್ರಶ್ನೆ ಇಲ್ಲಿ ಚರ್ಚೆಗೆ ಬಂದಿದೆ. ಈ ಸಭೆಯಲ್ಲೇ ಈ ನೌಕರಿಗಳನ್ನು ಕೊಡತಕ್ಕ ವಿಚಾರದಲ್ಲಿ ಆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಗೂ ಸರ್ಕಾರದವರಿಗೂ ನಡೆಯುತ್ತಿರುವ ವ್ಯವಹಾರವನ್ನು ನೋಡಿದರೆ, ಈ ಎರಡೂ ಒಂದು ಹೊಂದಾಣಿಕೆಯಿಂದ ಹೋಗತಕ್ಕ

ಒಂದು ಪದ್ಧತಿ ಇದೆಯೋ ಇಲ್ಲವೋ ಎನ್ನುವ ಒಂದು ಸಂಶಯ ಉಂಟಾಗುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ತುಂಬಾ ನಿಸ್ಸಹಾಯ ಸ್ಥಿತಿಯಲ್ಲಿದ್ದಾರೆಂಬ ಭಾವನೆ ಈ ದಿವಸ ಕಂಡು ಬರುತ್ತದೆ. ಈ ದಿವಸ ಬೆಳಗ್ಗೆ ನಡೆದಂಥ ಒಂದು ಪ್ರಶ್ನೋತ್ತರ ಕಾಲದಲ್ಲಿ 1957 ಮತ್ತು 1958ರಲ್ಲಿ ಪ್ರತಿಯೊಂದು ಭಾಗದಿಂದಲೂ ಶಿಫಾರ್ಸುಮಾಡಲಾಗಿದ್ದ ನೌಕರರುಗಳ ಸಂಖ್ಯೆ ಏನಿದ್ದಿತು ಎಂದು ನೋಡಿದರೆ—1957ರಲ್ಲಿ ನೇಮಿಸಿದ 5006 ಹುದ್ದೆಗಳಲ್ಲಿ ಹೊಸ ಮೈಸೂರು ಪ್ರದೇಶಕ್ಕೆ ಕೇವಲ 622 ಸ್ಥಾನಗಳು ಲಭಿಸಿವೆ. ಇನ್ನು 1958ರಲ್ಲಿ ಹಂಚಿದ 3754 ಹುದ್ದೆಗಳಲ್ಲಿ ಹೊಸ ಮೈಸೂರಿಗೆ ಕೇವಲ 430 ಹುದ್ದೆಗಳು ದೊರೆತಿರುತ್ತವೆ. ಇದಕ್ಕೆ ಕಾರಣವೇನಿರಬೇಕೆಂಬುದನ್ನು ಆಲೋಚಿಸಿದರೆ—ಈ ಕಮಿಷನ್ ಅವರ ಕಡೆಗೆ ಬರುವ ಅರ್ಜಿಗಳನ್ನು ಆ ಉಮೇದುವಾರರುಗಳನ್ನು ನಂದರ್ಶನಕ್ಕೆ ಕರೆದಾಗ ತಳ್ಳಿಹಾಕುತ್ತಿರಬೇಕು, ಇಲ್ಲವೇ ಅವರಲ್ಲಿರತಕ್ಕ ಅರ್ಹತೆಯನ್ನು ಸರಿಯಾಗಿ ಪರಿಶೀಲನೆ ಕೆಲವು ಅರ್ಜಿಗಳನ್ನು ತಳ್ಳಿಹಾಕುತ್ತಿರಬಹುದು ಎನ್ನತಕ್ಕದ್ದು ಎದ್ದು ಕಾಣುತ್ತಿದೆ. ಆದರೆ ಈ ವಿಚಾರದಲ್ಲಿ ಹಳೆಯ ಮೈಸೂರಿನವರ ವಿಚಾರದಲ್ಲಿ ಹೆಚ್ಚು ಶಿಫಾರ್ಸಾಗಿ ಹೆಚ್ಚು ಸ್ಥಾನಗಳು ಅವರಿಗೆ ದೊರಕಿವೆ ಎನ್ನತಕ್ಕ ಭಾವನೆ ನನಗೊಬ್ಬನಿಗೇಕೆ ಇಲ್ಲರತಕ್ಕ ಅನೇಕ ಮಾನ್ಯ ಸದಸ್ಯರಿಗೆ ಈ ಭಾವನೆ ಬಂದಿದೆ. ಇದೇ ಸಭೆಯಲ್ಲಿ ಮಾನ್ಯ ಆರ್ಥಿಕ ಸಚಿವರು ಮಾತನಾಡುತ್ತ, ನಾವೂ—ಹಳೆಯ ಮೈಸೂರಿನ ಸದಸ್ಯರೂ ಕಲೆತು ಎಷ್ಟೋ ವಿಚಾರಗಳನ್ನು ಮಾಡುತ್ತಿದ್ದೇವೆ. ಆದರೆ ಇನ್ನೂ ಆ ಒಂದು ಸರಿಯಾದ ಹೊಂದಾವಣಿಕೆ ಬಂದಿಲ್ಲವೆಂಬುದಾಗಿ ಹೇಳಿದುದಕ್ಕೆ ಇದು ಒಂದು ಒಳ್ಳೆಯ ನಿದರ್ಶನವಾಗಿದೆ. ಅಂತೂ ಇಲ್ಲಿಯ ತನಕ ಆ ಪಬ್ಲಿಕ್ ಸರ್ವೀಸ್ ಕಮಿಷನ್ ಮಾಡಿರತಕ್ಕ ಶಿಫಾರ್ಸುಗಳೆಲ್ಲ ಕೇವಲ ಹಳೆಯ ಮೈಸೂರಿಗೆ ಪಾತ್ರ ಅನುಕೂಲವಾಗಿರುತ್ತವೆಂಬ ಭಾವನೆ ಜನರಲ್ಲಿ ಮೂಡಿದೆ. ಹೊಸ ಮೈಸೂರು ಪ್ರದೇಶಗಳಿಂದ ಈ ಕೆಲಸಗಳಿಗೆ ಅರ್ಜಿಹಾಕಿದ್ದ ಉಮೇದುವಾರರುಗಳಿಗೆ ಏನೂ ಪುರಸ್ಕಾರವೇ ಆ ಕಮಿಷನ್ನಿನಲ್ಲಿ ದೊರೆತಿರುವುದಿಲ್ಲ. ಇದರಿಂದ ಆ ಜನರಲ್ಲಿ ಸಾಕಷ್ಟು ಅತೃಪ್ತಿ ಅಸಮಾಧಾನಗಳು ಮೂಡಿರುತ್ತವೆ. ಈ ಅತೃಪ್ತಿಯನ್ನು ತೊಡೆದು ಹಾಕದಿದ್ದರೆ ದೇಶೋದ್ಧಾರ ಆಗುವುದಿಲ್ಲ. ದೇಶಕ್ಕೆ ತುಂಬಾ ತೊಂದರೆ. ಈ ತೊಂದರೆಯನ್ನು ತಪ್ಪಿಸಿದ ಹೊರತು ಈ ಸಭೆಯ ಮತ್ತು ಸರ್ಕಾರದ ಉದ್ದೇಶಗಳೊಂದೂ ಸಫಲವಾಗಲಿಕ್ಕಿಲ್ಲ. ಇತ್ತೀಚೆಗೆ ದೇಶದ ಪ್ರಜಾಸಂಖ್ಯೆ ಮೊದಲಿದ್ದುದಕ್ಕಿಂತ ಎರಡೂವರೆ ಪಟ್ಟು ಹೆಚ್ಚಾಗಿದ್ದರೂ ಕೂಡ ಈ ಕಮಿಷನ್ನಿನಲ್ಲಿ ಮೆಂಬರುಗಳ ಸಂಖ್ಯೆ ಮೊದಲಿಷ್ಟಿತ್ತೋ ಈಗಲೂ ಅಷ್ಟೇ ಇದೆ. ಇದು ತುಂಬಾ ಶೋಚನೀಯ. ಮೊದಲು ಹಳೆಯ ಮೈಸೂರಿದ್ದಾಗ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸಂಖ್ಯೆಯೆಷ್ಟಿತ್ತೋ ಅಷ್ಟೇ ಸಂಖ್ಯೆ ರಾಜ್ಯ ಇಮ್ಮಡಿ, ಮುಮ್ಮಡಿಯಾದಾಗಲೂ ಕೆಲಸಮಾಡುತ್ತಿರುವುದರಿಂದಲೇ ಈ ಕೆಲಸಗಳೊಂದೂ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ಈ ಕೆಲಸಗಳಾಗತಕ್ಕದ್ದನ್ನು ಯಾವ ಪ್ರಜೆಯೂ ಒಪ್ಪತಕ್ಕ ಮಾತಲ್ಲ. ಈಗ ಕೆಲಸ ಎರಡು ಪಟ್ಟು ಜಾಸ್ತಿಯಾಗಿದೆ.

ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಹರಿಜನರ ಸಂಖ್ಯೆಗನುಗುಣವಾಗಿ ಮತ್ತು ಹರಿಜನರ ಹಿತರಕ್ಷಣೆಗೋಸ್ಕರವಾಗಿ ಒಳ್ಳೆಯ ರೀತಿಯಲ್ಲಿ ರೂಲ್ಸನ್ನು ಮಾಡಿರುವುದನ್ನು ನೋಡಿದರೆ, ಈ ಸಭೆಯ ಹರಿಜನ ಸದಸ್ಯರಲ್ಲಿ ತಮ್ಮ ಜನರ ಹಿತರಕ್ಷಣೆ ಬಹಳ ಒಳ್ಳೆಯ ರೀತಿಯಾಗಿದೆಯೆಂದೂ ಮತ್ತು ಅಂತಹ ಮನೋಭಾವನೆ ಇವರಲ್ಲಿ ಮೂಡಿರುವುದು ಹರಿಜನರ ಏಳಿಗೆಗಾಗಿಯೇ ಎಂದು ನಾನು ತಿಳಿದಿದ್ದೇನೆ. ಆದರೂ ಒಬ್ಬ ಹರಿಜನರ ಸದಸ್ಯ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅವಶ್ಯವಾಗಿರಬೇಕೆಂದು ನನ್ನ ಸೂಚನೆ. ಇದಲ್ಲದೆ ಮಾನ್ಯ ಮುಂತ್ರಿಗಳು ಪ್ರಶ್ನೋತ್ತರಕ್ಕಾಲದಲ್ಲಿ ಉತ್ತರ ಕೊಡುತ್ತಾ ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ರೀಜಿನಲ್ಲಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿರುವವರಿಗೆ ಸ್ವಾಭಿಮಾನ ಪ್ರಾದೇಶಿಕ ಅಭಿಮಾನ ಸ್ವಾಭಾವಿಕವಾಗಿಯೇ ಇರುತ್ತವೆ. (ಹೊರ ಪ್ರಾಂತಗಳ) ಪ್ರಜೆಗಳಿಗೆ ಬಾಧಕವಾಗುವ ರೀತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ನಿಯಮಗಳು ರಚಿತವಾಗಬಾರದು. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲರುವವರು ತಂತಮ್ಮ ಕ್ಷೇತ್ರದ ಜನಗಳಿಗೆ ಮಾತ್ರ ಸ್ಥಾನಗಳನ್ನು ಪೂರ್ತಿಯಾಗಿಡುತ್ತಿದ್ದಾರೆ. ನಮ್ಮ ದೇಶದ ಜನಗಳನ್ನು ಹೆಚ್ಚಿನ ಅರ್ಹತೆ ಪಡೆದಿದ್ದರೂ ಹಳೆಯ ಮೈಸೂರಿನ ಭಾಗದಲ್ಲರತಕ್ಕ ಜನರಿಗೆ ಸರಕಾರಿ ನೌಕರಿಯಲ್ಲಿ ಹೆಚ್ಚು ಪ್ರಾತಿನಿಧ್ಯವನ್ನು ಕೊಡುತ್ತಿದ್ದೀರಿ. ಹಳೆಯ ಮೈಸೂರಿನಲ್ಲರತಕ್ಕವರೇ ಕಮಿಷನ್ನಿನಲ್ಲಿ ಮೆಂಬರುಗಳಾಗಿರಬೇಕೆಂಬ ಮನೋಭಾವವನ್ನು ತಾಳದೆ ಹೊರಗಡೆಯಿಂದ ಬಂದಿರುವವರೂ ಕಮಿಷನ್ನಿನಲ್ಲಿ ಸದಸ್ಯರಾಗಿರುವಂತೆ ವ್ಯವಸ್ಥೆಮಾಡಬೇಕು. Taking the area and population into consideration we demand at least two members.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇದ್ದಾರಲ್ಲಾ! Then Mysóre should have four, South Kanara 1, Hyderabad 2 and so on.

Sri G. B. SHANKAR RAO.—Government should decide on the basis of population ಹಿಂದೆ ಮಾತನಾಡಿದಂತಹ ಮಾನ್ಯಸದಸ್ಯರಾದ ಶ್ರೀ ವಾರ್ ಕೊತ್ವಾಳಯವರು ಮುಂಬೈ ಕರ್ಣಾಟಕದಲ್ಲಿ ಈಗ ರೆವಿನ್ಯೂ ಇಲಾಖೆಯಲ್ಲಿದ್ದಂಥ ನೌಕರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದರು. ಹೊರಗಡೆಯಿಂದ ಬಂದಂಥ ನೌಕರರು ಹಿಂದಿನ ಸರ್ಕಾರದ ಯಾವ ಒಂದು ನಿಯಮದ ಪ್ರಕಾರ ಇಲ್ಲನ ಸರ್ವಿಸ್ಸಿಗೆ ಬಂದು ಸೇರಿದರೋ ಆ ನಿಯಮವನ್ನು ಇಲ್ಲಿ ದೂರೀಕರಿಸಿ ಅಥವಾ ಕಡೆಗಾಣಿಸಿ, ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ಒಂದು ಮತ್ತು ಎರಡನೆಯ ಡಿವಿಜನ್ ಹುದ್ದೆಗಳನ್ನು ಹೊಸದಾಗಿ ನೇಮಕಮಾಡಿದ್ದರಿಂದ ಈಗಾಗಲೇ ಬೊಂಬಾಯಿ ಕರ್ಣಾಟಕದಲ್ಲಿ ರೆವಿನ್ಯೂ ಇಲಾಖೆಯಲ್ಲಿ ಕೆಲಸಮಾಡುವ ನೌಕರರಿಗೆ ಅವರ ಯಾವ ಒಂದು ಇಚ್ಛೆಗೆ ಅಥವಾ ಆಸೆಗೆ ಮನ್ನಣೆ ದೊರಕಿಲ್ಲ. ತಹಸೀಲ್‌ದಾರ್, ಅಸಿಸ್ಟೆಂಟ್ ಕಮಿಷನರ್, ಬಿ. ಡಿ. ಒ. ಗಳ ನೇಮಕದಲ್ಲಿ ರೆವಿನ್ಯೂ ಇಲಾಖೆಯವರ ಆಶೆ ಏನಿತ್ತೋ ಅದು ಪೂರ್ಣ ಪಾಲಾಗಿದೆ. ಹೀಗೆ ಮಾಡಿದ್ದರಿಂದ ಕೆಲಸದಲ್ಲಿ ಅವರ ದಕ್ಷತೆಯೇ ಮಾಯವಾಗಿದೆ. ಉತ್ತಮ ಮಟ್ಟದಲ್ಲಿ ಕೆಲಸ ಮಾಡಲಕ್ಕೆ ಆತಂಕವಾಗಿದೆ. ಇದರಿಂದ ನಿಜವಾಗಿ ರಾಜ್ಯಸರ್ಕಾರದ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ ಮತ್ತು ಸಂಬಂಧಪಟ್ಟ ನೌಕರರಲ್ಲಿ ಅಸಂತೃಪ್ತಿ ಪುಂಟಾಗುತ್ತದೆ. ಸರ್ಕಾರದ ಕೆಲಸಗಳಿಗೆ ಖಂಡಿತವಾಗಿ ಕುಂದಕ ಬರುತ್ತದೆ. ಹೊಸ ಕರ್ಣಾಟಕ ಆಗುವ ಕಾಲಕ್ಕೆ ಹಿಂದಿನ ಬೊಂಬಾಯಿಯಲ್ಲಿ ರೂಲ್ಸ್

(SRI G. B. SHANKAR RAO)

ಎನಿದ್ದುಪ್ಪೋ ಆ ರೂಲ್ಸನ್ನು ಇಲ್ಲಿಯ ಪಬ್ಲಿಕ್ ಸರ್ವಿಸ್ ಕಮಿಷನ್ ಅನುಸರಿಸುವಂತೆ ಮಾಡಬೇಕು. ನಮ್ಮ ಭವಿಷ್ಯತೆಯ ದೃಷ್ಟಿಯಿಂದ ಮುಂದೆ ನೌಕರರು ಎಲ್ಲರೂ ಕಲೆತು ಚೆನ್ನಾಗಿ ಕೆಲಸ ಮಾಡುವುದಕ್ಕೆ ಯಾವ ರೀತಿಯಲ್ಲೂ ಧಕ್ಕೆ ಬರಬಾರದು. ಆದುದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಂದ ಅವರಿಗೆ ಈಗಾಗಿರತಕ್ಕ ಅನ್ಯಾಯವನ್ನು ಸರಿಪಡಿಸಲು ಹೊರಗಡೆಯವರೂ ಸಹ ಕಮಿಷನ್ನಿನ ಸದಸ್ಯರಾಗಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ತಮ್ಮ ನಿಯಮಾವಳಿ ಪದ್ಧತಿಯಂತೆ ಅನುಸರಿಸದಿದ್ದುದರಿಂದ ದೇಶದಲ್ಲಿ ಏನು ಒಂದು ದೊಡ್ಡ ಅಲ್ಲೋಲಕಲ್ಲೋಲವಾಗಿ ದೆಯೋ ಅದನ್ನು ತೀವ್ರವಾಗಿ ಕೂಡಲೇ ಸರ್ಕಾರದವರು ಸರಿಪಡಿಸದಿದ್ದರೆ ಅವರು ಈ ಸರ್ಕಾರದ ವಿಷಯದಲ್ಲಿ ಒಂದು ಕೆಟ್ಟ ಭಾವನೆಯನ್ನು ತಾಳುತ್ತಾರೆ. ಅವರಲ್ಲಿ ಅಸಂತೋಷ, ಅಸಮಾಧಾನ, ಅತೃಪ್ತಿ ಬೆಳೆದು ಸರ್ಕಾರೀ ಕೆಲಸಕಾರ್ಯಗಳು ಸಮರ್ಪಕವಾಗಿ ಆಗುವುದಿಲ್ಲ. ಆದುದರಿಂದ ಸರ್ಕಾರದವರು ಕೂಡಲೇ ಇದನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. DOOMAPPA (Surathkal).—Mr. Speaker, much has been said about the Public Service Commission and its method of work and I do not want to take more time over it.

I would like to bring to the notice of this House and the Government that in the South Kanara District which belonged to the Madras area, recruitment to the posts of Deputy Tahsildars and Tahsildars and even of Deputy collectors was by promotion and not by direct recruitment. Only to the cadre of Probationary Revenue Inspectors some graduates were taken for some years and that was subsequently stopped. Now there is a lot of discontent among the lower ranks.....

Sri KADIDAL MANJAPPA.—I want to know from the Hon'ble Member whether direct recruitment was not in vogue in Madras before States' Reorganisation. To my knowledge there was direct recruitment.

Sri K. DOOMAPPA.—It was by promotion. Some years ago probationers were recruited, not now. In recent years those vacancies were filled only by promotion. So I request the Government to protect the interests of those who are in the services. We can have a reasonable ratio fixed between promotion and direct recruitment, say fifty : fifty.

Mr. SPEAKER.—We can continue this subject tomorrow. I do not think we have any complicated legislative business tomorrow.

MYSORE SILKWORM SEED (PRODUCTION, SUPPLY AND DISTRIBUTION) BILL, 1958.

Presentation of Report of Joint Select Committee

Sri T. MARIAPPA (Minister for Finance).—I beg to present the report of the Joint Select Committee on the Mysore Silkworm Seed (Production, Supply and Distribution) Bill, 1958.

Mr. SPEAKER.—The report is presented.